ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

SHRIDEVI EDUCATION



ಮಾಸಪತ್ರಿಕೆ
ಸಂಪುಟ 2, ಸಂಚಿಕೆ 7, ಮೇ 2024
SHRIDEVI ANTARANGA
Monthly Magazine

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್



ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ಸಮುದಾಯದ ಶಕ್ತಿ ನೈತಿಕತೆ

ಸಾಂವಿಧಾನಿಕ ಹುದ್ದೆಯಲ್ಲಿರುವವರು, ರಾಜಕೀಯಪಕ್ಷದ ನೇತಾರರು, ಲೋಕಸಭೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಆಡುತ್ತಿರುವ ಮಾತುಗಳನ್ನು ಕೇಳಿದರೆ ದೇಶದ ಭವಿಷ್ಯ ಕುರಿತು ಚಿಂತೆ ಮೂಡುತ್ತದೆ.




### ಭವಿಷ್ಯದ ಚಿಂತೆ

2024ರ ಮಾರ್ಚ್ 20ರಂದು ಭಾರತದ ಚುನಾವಣಾ ಆಯೋಗ 18ನೆಯ ಲೋಕಸಭೆಗಾಗಿ ವೇಳಾಪಟ್ಟಿಯನ್ನು ಪ್ರಕಟಿಸಿತು. ಏಳು ಹಂತಗಳಲ್ಲಿ ಲೋಕಸಭೆಗೆ ಚುನಾವಣೆ ನಡೆಸಲಾಗುವುದು ಎಂದು ಆಯೋಗ ಹೇಳಿತು. ಅಂದಿನಿಂದಲೇ 'ನೀತಿ ಸಂಹಿತೆ' ಜಾರಿಗೆ ಬಂತು. ಜೂನ್ ಎರಡನೆಯ ವಾರದ ತನಕ ನೀತಿ ಸಂಹಿತೆ ಅಸ್ತಿತ್ವದಲ್ಲಿರುತ್ತದೆ.

ಕೇಂದ್ರ ಚುನಾವಣಾ ಆಯೋಗದ ತೀರ್ಮಾನದಂತೆ ಕರ್ನಾಟಕದಲ್ಲಿ ಏಪ್ರಿಲ್ 26 ಮತ್ತು ಮೇ 7 ರಂದು ಎರಡು ಹಂತದ ಚುನಾವಣೆಗಳು ನಡೆದವು. ಕರ್ನಾಟಕ ರಾಜ್ಯದಿಂದ ಆಯ್ಕೆಯಾಗುವ 28 ಲೋಕಸಭಾ ಸದಸ್ಯರ ಭವಿಷ್ಯ ವಿದ್ಯುನ್ಮಾನ ಯಂತ್ರದಲ್ಲಿ ಲಾಕ್ ಆಗಿ ಕುಳಿತಿದೆ. ಜೂನ್ 4ರ ತನಕ ಅದು ಬಹಿರಂಗಗೊಳ್ಳುವುದಿಲ್ಲ.

ಮಾರ್ಚ್ 20ರ ನಂತರ ದೇಶ ಮತ್ತು ರಾಜ್ಯದಲ್ಲಿ ನಡೆಯುವ ವಿದ್ಯಮಾನಗಳನ್ನು ಕಂಡಾಗ ಸೂಕ್ಷ್ಮಮನಸ್ಸಿನ ವ್ಯಕ್ತಿಗಳಿಗೆ ದೊಡ್ಡ ಆಘಾತವಾಗುವುದರಲ್ಲಿ ಸಂಶಯವಿಲ್ಲ. ಸಾಂವಿಧಾನಿಕ ಹುದ್ದೆಯಲ್ಲಿರುವವರು, ರಾಜಕೀಯಪಕ್ಷದ ನೇತಾರರು, ಲೋಕಸಭೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಆಡುತ್ತಿರುವ ಮಾತುಗಳನ್ನು ಕೇಳಿದರೆ ದೇಶದ ಭವಿಷ್ಯ ಕುರಿತು ಚಿಂತೆ ಮೂಡುತ್ತದೆ. ಈ ದೇಶಕ್ಕೆ ಭವಿಷ್ಯವುಂಟೇ ಎನ್ನುವ ಸಂಶಯ ಮೂಡುತ್ತದೆ.

### ಸ್ವಾತಂತ್ರ್ಯ ಹೋರಾಟಗಾರರು ನಿಸ್ವಾರ್ಥಿಗಳು

1857ರಲ್ಲಿ ನಡೆದ ಮೊದಲ ಸ್ವಾತಂತ್ರ್ಯಸಂಗ್ರಾಮದಿಂದ ಹಿಡಿದು ಈ ಸಲದ ಲೋಕಸಭಾ ಚುನಾವಣೆಯ ತನಕ ನಮ್ಮನ್ನಾಳುವವರು ಧರ್ಮ ಮತ್ತು ಜಾತಿಗಳ ನಡುವೆ ಕಂದಕ ಮೂಡಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಹೀಗೆ ಭಾರತೀಯರನ್ನು ದುರುಪಯೋಗ ಪಡಿಸಿಕೊಳ್ಳುವವರು ವಿದೇಶಿಯರಾಗಿರಬಹುದು ಅಥವಾ ಸ್ವದೇಶಿಯರಾಗಿರಬಹುದು ಅವರಲ್ಲಿ ವ್ಯತ್ಯಾಸವಿಲ್ಲ. ಜನರನ್ನು ಒಂದೂಗೂಡಿಸುವಲ್ಲಿ ಅವರಿಗೆ ವಿಶ್ವಾಸವಿಲ್ಲ. ಜನರು ಧರ್ಮ ಮತ್ತು ಜಾತಿ ಕಾರಣಕ್ಕೆ ಕಿತ್ತಾಟ ಮಾಡಿಕೊಂಡರೆ ನಮಗೆ ಅನುಕೂಲ ಎನ್ನುವುದು ಅವರುಗಳ ಭಾವನೆ.

ಬ್ರಿಟಿಷರು ಭಾರತವನ್ನು 250 ವರ್ಷಗಳ ಕಾಲ ಆಳಲು, ಭಾರತೀಯರನ್ನು ಗುಲಾಮರನ್ನಾಗಿ ಮಾಡಿಕೊಳ್ಳಲು ಆಯ್ದುಕೊಂಡ ಮಾರ್ಗವೇ ಭಾರತೀಯರಲ್ಲಿ ವೈಮನಸ್ಸು ಮೂಡಿಸುವುದಾಗಿತ್ತು. ಅದಕ್ಕೆ ಬೇಕಾದ ತುಪ್ಪವನ್ನು ನಮ್ಮವರು ಬ್ರಿಟಿಷರು ಹೊತ್ತಿಸಿದ ಬೆಂಕಿಗೆ ಸುರಿಯುತ್ತಿದ್ದರು. ಅದರ ಫಲ 1947ರಲ್ಲಿ ಭಾರತ ಧರ್ಮದ ಆಧಾರದ ಮೇಲೆ ವಿಭಜನೆಯಾಯಿತು.

▶▶ 2ನೇ ಪುಟಕ್ಕೆ...

## ಗಡಿನಾಡಿನ ಹಳ್ಳಿಗಳ ಮಕ್ಕಳ ನೇತ್ರಚಿಕಿತ್ಸೆಗೊಂದು ಹೊಸ ಕಾರ್ಯಕ್ರಮ

ತುಮಕೂರಿನ ಶ್ರೀದೇವಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಹಾಗೂ ಪಾವಗಡದ ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಮತ್ತು ಬೆಂಗಳೂರಿನ ನಯೋನಿಕಾ ಕಣ್ಣಿನ ಚಿಕಿತ್ಸಾ ಯೋಜನಾ ಟ್ರಸ್ಟ್, ಇವರ ಸಂಯುಕ್ತಾಶ್ರಯದಲ್ಲಿ ಪಾವಗಡ ತಾಲ್ಲೂಕಿನ ಗ್ರಾಮದ ಮಕ್ಕಳ ನೇತ್ರ ಚಿಕಿತ್ಸೆ, ಅಗತ್ಯವಾದ ಕಡೆ ಶಸ್ತ್ರಚಿಕಿತ್ಸೆ ಹಾಗೂ ಕನ್ನಡಕಗಳ ನೀಡುವಿಕೆ ಮೊದಲಾದ ಯೋಜನೆಗಳನ್ನು ಆರಂಭಿಸಲಾಗಿದೆ. ಈ ಯೋಜನೆಯು ಸಂಪೂರ್ಣವಾಗಿ ಉಚಿತವಾಗಿರುತ್ತದೆ. ಪಾವಗಡ ತಾಲ್ಲೂಕಿನ ಪ್ರತಿಯೊಂದು ಗ್ರಾಮದ ಹಾಗೂ ಮೂಲೆ ಮೂಲೆಯಲ್ಲಿರುವ ಕುಗ್ರಾಮಗಳಿಗೂ ಈ ಸೇವೆಯು ಲಭ್ಯವಾಗುವಂತೆ ಕಾರ್ಯಕ್ರಮ ರೂಪಿಸಲಾಗಿದೆ.

ಒಂದು ಅಂದಾಜಿನ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 65 ಲಕ್ಷ ಮಕ್ಕಳಿಗೆ ದೃಷ್ಟಿದೋಷ ಹಾಗೂ ಕಣ್ಣಿಗೆ ಸಂಬಂಧಪಟ್ಟ ನ್ಯೂನತೆಗಳಿವೆ. ಅಂದರೆ ರಾಜ್ಯದಲ್ಲಿ ಶೇಕಡ7.5ರಷ್ಟು ದೃಷ್ಟಿದೋಷವುಳ್ಳ ಮಕ್ಕಳಿದ್ದಾರೆ. ಈ ನ್ಯೂನತೆಗಳನ್ನು ದೂರಪಡಿಸಲು 3,25,000 ಕನ್ನಡಕಗಳ ಆವಶ್ಯಕತೆಯಿದೆ. ಹಾಗಾಗಿ ಈ ಯೋಜನೆಯನ್ನು ಬರಪೀಡಿತ, ಹಿಂದುಳಿದ ಹಾಗೂ ಅತ್ಯಂತ ಹೆಚ್ಚಿನ ಸಂಖ್ಯೆಯ ದೃಷ್ಟಿದೋಷವುಳ್ಳ ಮಕ್ಕಳಿಗೆ ಉಪಯೋಗವಾಗುವಂತೆ ರೂಪಿಸಲಾಗಿದೆ. ಈ ಯೋಜನೆಯ ಫಲವನ್ನು ಗಡಿ ಭಾಗದ ಸರಿಸುಮಾರು 500 ಹಳ್ಳಿಗಳಿಗೆ ತಲುಪಿಸಲಾಗುತ್ತದೆ.

ಪಾವಗಡದ ಶ್ರೀಶಾರದಾದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಈ ಯೋಜನೆಯ ಪೂರ್ಣ ಜವಾಬ್ದಾರಿಯನ್ನು ಹೊತ್ತಿರುತ್ತದೆ. ಅದಕ್ಕೆ ತುಮಕೂರಿನ ಶ್ರೀದೇವಿ ಮೆಡಿಕಲ್ ಕಾಲೇಜು ಮತ್ತು ನಯೋನಿಕಾ ದತ್ತಿ ಸಂಸ್ಥೆ ಸಹಕಾರ ನೀಡುತ್ತಿದೆ.

ದಿನಾಂಕ.17–4–2024ರಂದು ಶ್ರೀಶಾರದಾದೇವಿ ಕಣ್ಣಿನ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರಕ್ಕೆ ನಾಡಿನ ಪ್ರಸಿದ್ಧ ವೈದ್ಯಕೀಯ ಸಂಸ್ಥೆಯಾಗಿರುವ ಶ್ರೀದೇವಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ. ಹುಲಿನಾಯ್ಕರ್, ಅದೇ ಕಾಲೇಜಿನ ನೇತ್ರಶಾಸ್ತ್ರ ವಿಭಾಗದ ಪ್ರಾಧ್ಯಾಪಕರದ ಡಾ.ಲಾವಣ್ಯ ರಮಣ್, ನಯೋನಿಕಾ ಸಂಸ್ಥೆಯ ಪ್ರಶಾಂತ್ ಎಸ್.ಬಿ., ಹಾಗೂ ಶ್ರೀದೇವಿ ಮೆಡಿಕಲ್ ಸಂಸ್ಥೆಯ ಆಡಳಿತಾಧಿಕಾರಿಗಳಾದ ಬ್ರಹ್ಮದೇವ್ ಅವರುಗಳು ಭೇಟಿ ನೀಡಿ ಪಾವಗಡದ ಶ್ರೀಶಾರದಾದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷರಾದ ಪೂಜ್ಯ ಸ್ವಾಮಿಜಪಾನಂದಜೀ ಮಹಾರಾಜ್ ಜೊತೆ ಉನ್ನತ ಮಟ್ಟದ ಸಭೆಯನ್ನು ನಡೆಸಿದರು.

▶▶ 7ನೇ ಪುಟಕ್ಕೆ...



ಪಾವಗಡದ ಶ್ರೀಶಾರದಾದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷರಾದ ಪೂಜ್ಯ ಸ್ವಾಮಿಜಪಾನಂದಜೀ ಮಹಾರಾಜ್ ಜೊತೆಯಲ್ಲಿ ಡಾ. ರಮಣ್ ಹುಲಿನಾಯ್ಕರ್ ಮತ್ತು ಡಾ. ಲಾವಣ್ಯ ರಮಣ್ ಹುಲಿನಾಯ್ಕರ್.

## ಪ್ರೀತಿ, ಪಾತ್ರರನ್ನು ಅರ್ಥಪೂರ್ಣವಾಗಿ ನೆನಪಿಸಿಕೊಳ್ಳುವುದು



ಫಿಜಿಯೋಥೆರಪಿಸ್ಟ್ ಡಾ.ಎನ್.ನಾರಾಯಣಪ್ಪ ಮತ್ತು ಶ್ರೀಮತಿ ಜಯಮ್ಮ ನಾರಾಯಣಪ್ಪ ದಂಪತಿಗಳು, ತಮ್ಮ ಮಗಳು ದಿವಂಗತ ಕುಮಾರಿ ಎನ್.ಸುಧಾ ಅವರ ಹೆಸರಿನಲ್ಲಿ ಪ್ರತಿಭಾವಂತ ಫಿಜಿಯೋಥೆರಪಿ ಅಧ್ಯಯನದ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ' ಮತ್ತು ಫಿಜಿಯೋಥೆರಪಿ ವಿಭಾಗದಲ್ಲಿ ಅಮೂಲ್ಯ ಸೇವೆ ಮಾಡಿರುವ ಫಿಜಿಯೋಥೆರಪಿಸ್ಟ್‌ಗಳಿಗೆ 'ಸೇವಾ ಪುರಸ್ಕಾರ' ನೀಡಲು ತುಮಕೂರಿನ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನಲ್ಲಿ ನಿಧಿಯೊಂದನ್ನು ಮೇ 6 ರಂದು ಸ್ಥಾಪಿಸಿದರು. ಅದರ ಅಂಗವಾಗಿ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರಿಗೆ ಚೆಕ್ ನೀಡುತ್ತಿದ್ದಾರೆ. ಚಿತ್ರದಲ್ಲಿ ಎಡಗಡೆಯಿಂದ ಪ್ರೊ. ಕೆ.ಎ.ಆನಂದಿ, ಶ್ರೀಮತಿ ಜಯಮ್ಮ ನಾರಾಯಣಪ್ಪ, ಡಾ.ಎನ್.ನಾರಾಯಣಪ್ಪ, ಶ್ರೀಮತಿ ರೂಪ ವರ್ಣೇಕರ್, ಡಾ. ಕೆ.ಆರ್.ಕಮಲೇಶ, ಪ್ರೊ.ನರೇಂದ್ರ ವಿಶ್ವನಾಥ್, ಡಾ.ರಮಣ ಹುಲಿನಾಯ್ಕರ್ ಹಾಗೂ ಶ್ರೀಮತಿ ಅಂಬಿಕಾ ಹುಲಿನಾಯ್ಕರ್.

# ಸಮುದಾಯದ ಶಕ್ತಿ ನೈತಿಕತೆ

◀◀ ...ಮೊದಲನೇ ಪುಟದಿಂದ

ಭಾರತ ಸ್ವಾತಂತ್ರ್ಯ ಪಡೆಯಲು ಹೋರಾಟ ಮಾಡಿ ನಮ್ಮ ದೇಶದ ಲಕ್ಷಾಂತರ ಜನರು ಪ್ರಾಣ, ಮಾನ ಮತ್ತು ಆಸ್ತಿಯನ್ನು ಕಳೆದುಕೊಂಡಿದ್ದಾರೆ. ತಮ್ಮ ಯೌವನದ ದಿನಗಳನ್ನು ಸ್ವಾತಂತ್ರ್ಯಹೋರಾಟಕ್ಕೆ ಮೀಸಲಿಟ್ಟಿದ್ದಾರೆ. ತಮ್ಮ ಕುಟುಂಬವನ್ನು ನಿರ್ಲಕ್ಷ್ಯ ಮಾಡಿ ಸ್ವಾತಂತ್ರ್ಯಸಂಗ್ರಾಮದಲ್ಲಿ ಭಾಗವಹಿಸಿದ್ದಾರೆ.

ಈ ಹೋರಾಟದಲ್ಲಿ ಭಾಗವಹಿಸಿದ್ದ ಬಹುಸಂಖ್ಯಾತ ಜನರು ಸ್ವಾತಂತ್ರ್ಯಾನಂತರ ಯಾವುದೇ ಪ್ರತಿಫಲವನ್ನು ಪಡೆದುಕೊಂಡಿಲ್ಲ.

ನನ್ನ ಹುಟ್ಟೂರು ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ತುಪ್ಪದಕುರಹಟ್ಟಿ. ನಮ್ಮೂರಿನಲ್ಲಿ ಮೂವರು ಸ್ವಾತಂತ್ರ್ಯ ಹೋರಾಟಗಾರರಿದ್ದರು. ಅವರುಗಳೆಂದರೆ ಬಸವರೆಡ್ಡಿ ಕಿರೇಸೂರು, ಮಲ್ಲರಾವ್ ಕುಲಕರ್ಣಿ ಮತ್ತು ನಮಸ್ತೆಮಠ. ಸ್ವಾತಂತ್ರ್ಯಾನಂತರ ಹುಟ್ಟಿದ ನಮಗೆ ಅವರೆಲ್ಲಾ ಪೂಜ್ಯರೆನಿಸಿದ್ದರು. ಅವರುಗಳೇನೂ ಹೆಚ್ಚು ವಿದ್ಯಾವಂತರಲ್ಲ, ಅಂತಹ ಸಿರಿವಂತರಲ್ಲ. ಮಹಾತ್ಮ ಗಾಂಧೀಜಿ ಅವರ ವ್ಯಕ್ತಿತ್ವಕ್ಕೆ ಆಕರ್ಷಿತರಾಗಿ ಸ್ವಾತಂತ್ರ್ಯಹೋರಾಟದಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದವರು. ನಾನು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಅವರನ್ನು ಹತ್ತಿರದಿಂದ ಕಂಡಿದ್ದೆ. ಖಾದಿಧಾರಿಗಳಾಗಿದ್ದ ಅವರು ತಮ್ಮ ನಡೆ, ನುಡಿಯಲ್ಲಿ ಮಹಾತ್ಮ ಗಾಂಧೀಜಿ ಅವರ ಆದರ್ಶಗಳನ್ನು ಪಾಲಿಸುತ್ತಿದ್ದರು. ಸ್ವಾತಂತ್ರ್ಯೋತ್ಸವ ದಿನ ನಮ್ಮ ಶಾಲೆಗೆ ಬಂದು ಮಹಾತ್ಮ ಗಾಂಧೀಜಿ ಮತ್ತು ಸ್ವಾತಂತ್ರ್ಯ ಹೋರಾಟದ ಪ್ರಮುಖ ವಿಚಾರಗಳನ್ನು ಹೇಳುತ್ತಿದ್ದರು.

ಇಂತಹವರು ನಮ್ಮೂರಿಗೆ ಮಾತ್ರ ಸೀಮಿತವಾದವರಲ್ಲ. ಭಾರತದ ಹಳ್ಳಿಹಳ್ಳಿಗಳಲ್ಲೂ ಇಂತಹವರ ಸಂಖ್ಯೆ ಒಂದು ಕಾಲದಲ್ಲಿ ಯಥೇಚ್ಛವಾಗಿತ್ತು. ಸ್ವಾತಂತ್ರ್ಯಕ್ಕಾಗಿ ದೊಡ್ಡ ತ್ಯಾಗ ಮಾಡಿದ್ದೇವೆ, ನಮಗೆ ಸವಲತ್ತುಗಳನ್ನು ಕೊಡಿ ಎಂದವರು ಕೇಳಿಲ್ಲ. ಅವರ ತ್ಯಾಗ ಮತ್ತು ಹೋರಾಟದಿಂದ ನಾವು ಸ್ವಾತಂತ್ರ್ಯ ಗಳಿಸಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದೇವೆ. ಚುನಾವಣೆಗಳನ್ನು ನಡೆಸುತ್ತಿದ್ದೇವೆ. ಐದು ವರ್ಷಕ್ಕೊಮ್ಮೆ ನಡೆಯುವ ಚುನಾವಣೆಗಳು ದೇಶದ ಅಭಿವೃದ್ಧಿಯ ದಿಕ್ಸೂಚಿಯಾಗಬೇಕಿತ್ತು. ಒಂದು ಚುನಾವಣೆಯಿಂದ ಮತ್ತೊಂದು ಚುನಾವಣೆಯ ಹೊತ್ತಿಗೆ ನಾವೇನು ಸಾಧಿಸಿದ್ದೇವೆ ಎನ್ನುವುದನ್ನು ರಾಜಕೀಯ ನಾಯಕರು ಹೇಳಬೇಕಾಗಿತ್ತು. ಅವರ ಮಾತನ್ನು ಜನರು ವಿಮರ್ಶೆ ಮಾಡಬೇಕಾಗಿತ್ತು. ಅಂತಹ ವಾತಾವರಣ ನಿರ್ಮಾಣವಾಗಿದ್ದರೆ ದೇಶದ ಪ್ರಜಾಪ್ರಭುತ್ವ ಸರಿಯಾದ ದಾರಿಯಲ್ಲಿ ಸಾಗುತ್ತಿದೆ ಎಂದುಕೊಳ್ಳಬಹುದಾಗಿತ್ತು.

### ವಿಷಯಾಧಾರಿತ ಚುನಾವಣೆ ಸಾಧ್ಯವಿಲ್ಲವೇ?

ಸ್ವಾತಂತ್ರ್ಯ ಬಂದು 77ವರ್ಷಗಳ ನಂತರವೂ ನಮ್ಮ ಚುನಾವಣೆಗಳು ವಿಷಯಾಧಾರಿತವಾಗಿ ನಡೆಯುತ್ತಿಲ್ಲ ಎನ್ನುವುದೇ ದೊಡ್ಡ ಕೊರಗು. ಇದೊಂದು ನಿರಾಶೆಯ ವಿಷಯ. ಇದಕ್ಕೆ ಕಾರಣವಿದೆ. ಉತ್ತಮ ಪ್ರಜಾಪ್ರಭುತ್ವದ ತಳಪಾಯವೇ ಆಯಾಯ ದೇಶದ ಸಾರ್ವಜನಿಕಕ್ಷೇತ್ರ. ದೇಶದ ಸಾರ್ವಜನಿಕಕ್ಷೇತ್ರ ನೈತಿಕಮೌಲ್ಯಗಳ ಮೇಲೆ ನಿಂತಿರಬೇಕು.

ವಿಶ್ವದಲ್ಲೇ ಅತ್ಯಂತ ಹಳೆಯದಾದ ಭಾರತ ದೇಶದ ಸಾರ್ವಜನಿಕಕ್ಷೇತ್ರ ಹೇಗಿದೆ ಎಂದು ಒಮ್ಮೆ ನೋಡಿ. ಸರ್ಕಾರ ಸದಾ ಕ್ರಿಯಾಶೀಲವಾಗಿ ಕೆಲಸ ಮಾಡಿದರೆ ಮಾತ್ರ, ದೇಶದ ಶ್ರೀಸಾಮಾನ್ಯ ಬದುಕಿನಲ್ಲಿ ಒಂದಿಷ್ಟು ನೆಮ್ಮದಿ ಕಾಣಲು ಸಾಧ್ಯ. ಚುನಾವಣಾ ನೀತಿ ಸಂಹಿತೆಯ ನೆಪದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರ ತಟಸ್ಥವಾಗಿದೆ. 140 ಕೋಟಿ ಜನಸಂಖ್ಯೆಯುಳ್ಳ ಭಾರತದಲ್ಲಿ ತೊಂಬತ್ತು ದಿನಗಳ ಕಾಲ ಸರ್ಕಾರ ನಿದ್ರಾವಸ್ಥೆಗೆ ಜಾರಿದರೆ ದೇಶದ ಆರ್ಥಿಕ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗುತ್ತದೆ ಎನ್ನುವುದು ಊಹೆಗೂ ನಿಲುಕದ ವಿಚಾರವಾಗಿದೆ. ಇಂತಹ ತಾಂತ್ರಿಕ ಯುಗದಲ್ಲಿ ಲೋಕಸಭಾ ಚುನಾವಣೆ ನಡೆಸಲು ಮೂರು ತಿಂಗಳನ್ನು ವ್ಯಯ ಮಾಡಿದರೆ ನಮ್ಮಂತಹ ಮೂರ್ಖರು ವಿಶ್ವದಲ್ಲಿ ಯಾರೂ ಇಲ್ಲ. ಭಾರತದಲ್ಲಿ 1952ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆ ಕೇವಲ ನಾಲ್ಕು ತಿಂಗಳಲ್ಲಿ ಮುಕ್ತಾಯವಾಗಿತ್ತು.

ಚುನಾವಣೆ ಘೋಷಣೆಯಾದ ಮೇಲೆ ದೇಶದ ರಾಜಕೀಯಪಕ್ಷಗಳು ತಮ್ಮ ಗೆಲುವೊಂದನ್ನೇ ಮಾನದಂಡವನ್ನಾಗಿಟ್ಟುಕೊಂಡಿವೆ. ದೇಶದ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ ಎಂತಹ ಅನಾಹುತವಾದರೂ ಅವುಗಳತ್ತ ನೋಡುವುದಿಲ್ಲ. ದೇಶ ರಾಜಕೀಯ ನಾಯಕರುಗಳು ನಾವಾಡುವ ಮಾತಿಗೂ ಚಿಂತನೆಗೂ ಯಾವುದೇ ಸಂಬಂಧವಿಲ್ಲವೆಂದು ನಿರೂಪಿಸುತ್ತಿದ್ದಾರೆ.




**"ವರ್ತಮಾನ ಜೀವನದ ಎಲ್ಲಾ ಹಂತಗಳಲ್ಲಿ ಅನೈತಿಕತೆಯ ಕರಾಳ ಛಾಯೆಗಳು ವೇಗವಾಗಿ ನಿರ್ದಿಷ್ಟ ಆಕಾರಗಳನ್ನು ಪಡೆದುಕೊಳ್ಳುತ್ತಿದೆ. ಈ ಅನೈತಿಕತೆಯ ಕೊಳಕನ್ನು ತೊಡೆದು ಹಾಕಲು ಬಲವಾದ ನೈತಿಕಶಕ್ತಿಯ ಅಗತ್ಯವಿದೆ."**

### ಸಮಯ ಸಾಧಕತನ

ಚುನಾವಣೆಯ ಗೆಲುವಿಗೆ ಏನೂ ಬೇಕಾದರೂ ಮಾಡುತ್ತಾರೆ ಎನ್ನುವುದಕ್ಕೆ ಹಾಸನದ ಪೆನ್‌ಡ್ರೈವ್ ಪ್ರಕರಣವೇ ಸಾಕ್ಷಿಯಾಗಿದೆ. ಇದು ಗರಿಷ್ಠಮಟ್ಟದಲ್ಲಿ ದುರುಪಯೋಗವಾಗುವುದಕ್ಕೆ ಇಂಬುಕೊಟ್ಟವರು ಮಾಧ್ಯಮ ಪ್ರತಿನಿಧಿಗಳು. ಹೇಗಾದರೂ ಮಾಡಿ ತಮ್ಮ ಚಾನಲ್‌ಗಳ ಟಿ.ಆರ್.ಪಿ. ಹೆಚ್ಚು ಮಾಡಿಕೊಳ್ಳಲು ದೊರೆತ ಸುವರ್ಣಾವಕಾಶವೆಂದು ಮಾಧ್ಯಮ ಪ್ರತಿನಿಧಿಗಳು ಭಾವಿಸಿರುವುದು ಕನ್ನಡಿಗರ ದುರ್ದೈವದ ಸಂಗತಿ. ಇದರಿಂದ ರಾಜ್ಯದ ಪರಂಪರೆಗೆ ಆದ ಹಾನಿಯನ್ನು ಯಾರೂ ಚಿಂತಿಸುವುದಿಲ್ಲ. ಇದಕ್ಕೆ ಮುಖ್ಯ ಕಾರಣ ದುರಾಸೆ. ಈ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿ ಅವರ ಮಾತೊಂದು ನೆನಪಿಗೆ ಬರುತ್ತದೆ. "ಈ ಭೂಮಿ ಪ್ರತಿಯೊಬ್ಬರ ಅವಶ್ಯಕತೆಗಳನ್ನು ಪೂರೈಸುವಷ್ಟು ಸಮೃದ್ಧವಾಗಿದೆ. ಆದರೆ ದುರಾಸೆಗಳನ್ನಲ್ಲ". ಸಮಾಜ ಮತ್ತು ವಾಸಿಸುವ ವ್ಯಕ್ತಿ 'ಅಗತ್ಯ' ಮತ್ತು 'ದುರಾಸೆ'ಗಳ ನಡುವಿನ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು. ಕಳೆದ ನಲವತ್ತು ದಿನಗಳಿಂದ ರಾಜ್ಯದಲ್ಲಿ ವಿಷದ ಗಾಳಿ ಬೀಸುವಂತೆ ಅವರು ಮಾಡಿದ್ದಾರೆ. ಇದರಿಂದ ವಾತಾವರಣ ಎಷ್ಟು ಕಲುಷಿತವಾಗಬಹುದು ಎನ್ನುವುದು ಅವರಿಗೆ ಗೊತ್ತಿಲ್ಲ. ಇಂತಹ ಕೆಟ್ಟಸ್ಥಿತಿಯನ್ನು ನಿರ್ಮಾಣ ಮಾಡುವವರಿಗೆ ನೈತಿಕತೆಯ ಮಹತ್ವ ಗೊತ್ತಿಲ್ಲದಿರುವುದು ವಿಷಾದನೀಯ ಸಂಗತಿಯಾಗಿದೆ.

### ನೈತಿಕತೆ ಎಂದರೇನು?

ವಿರೋಧ ಮತ್ತು ಕಷ್ಟಗಳ ನಡುವೆಯೂ ವ್ಯಕ್ತಿ ತಾನು ನಂಬಿದ ಮೌಲ್ಯಗಳನ್ನು ಪಾಲಿಸುವುದೇ ನೈತಿಕತೆ. ನೈತಿಕತೆ ಎಂದರೆ ಸರಿಯಾದ ನಡವಳಿಕೆ, ನಿರ್ದಿಷ್ಟ ಸಂಸ್ಕೃತಿ ಮತ್ತು ಸಾರ್ವತ್ರಿಕ ಮೌಲ್ಯಗಳ ಪಾಲನೆ ಎನ್ನಲಾಗುತ್ತದೆ. 'ಇತರರು ತನ್ನನ್ನು ಹೇಗೆ ನಡೆಸಿಕೊಳ್ಳಬೇಕು ಎಂದು ಮನುಷ್ಯ ನಿರೀಕ್ಷೆ ಮಾಡುತ್ತಾನೋ, ಆತ ಇತರರನ್ನು ಹಾಗೇ ನಡೆಸಿಕೊಳ್ಳಬೇಕು ಎನ್ನುವುದು ನೈತಿಕತೆಯ ತತ್ವದ ಉದ್ದೇಶ.'

ಖ್ಯಾತ ಚಿಂತಕರಾದ ಪಿ.ಆರ್.ಸರ್ಕಾರ್ ಅವರು 'ದಿ ಗ್ರೇಟ್ ಯೂನಿವರ್ಸ್' ಎನ್ನುವ ಗ್ರಂಥದಲ್ಲಿ ಬರೆಯುವ ಮಾತುಗಳಿವು. "ವರ್ತಮಾನ ಜೀವನದ ಎಲ್ಲಾ ಹಂತಗಳಲ್ಲಿ ಅನೈತಿಕತೆಯ ಕರಾಳ ಛಾಯೆಗಳು ವೇಗವಾಗಿ ನಿರ್ದಿಷ್ಟ ಆಕಾರಗಳನ್ನು ಪಡೆದುಕೊಳ್ಳುತ್ತಿದೆ. ಈ ಅನೈತಿಕತೆಯ ಕೊಳಕನ್ನು ತೊಡೆದು ಹಾಕಲು ಬಲವಾದ ನೈತಿಕಶಕ್ತಿಯ ಅಗತ್ಯವಿದೆ. ಯಾವುದೇ ಸರ್ಕಾರದಿಂದ ಈ ನೈತಿಕಶಕ್ತಿಯನ್ನು ನಿರೀಕ್ಷೆ ಮಾಡುವುದು ಸಾಧ್ಯವಿಲ್ಲ. ಈ ನೈತಿಕಶಕ್ತಿಯನ್ನು ಸಾರ್ವತ್ರಿಕ ಮೌಲ್ಯಗಳನ್ನು ಪಾಲನೆ ಮಾಡುವ ಸಮಾಜದಿಂದ ಮಾತ್ರ ಪಡೆಯಲು ಸಾಧ್ಯ".

ಇಂದಿನ ಭಾರತದ ಸಾಮಾಜಿಕ ಪರಿಸ್ಥಿತಿಯನ್ನು ಗಮನಿಸಿದರೆ ಅದರಿಂದ ವ್ಯಕ್ತಿ ನೈತಿಕ ಮೌಲ್ಯಗಳನ್ನು ಪಡೆಯಲು ಸಾಧ್ಯವೇ ಎನ್ನುವ ಪ್ರಶ್ನೆ ಮೂಡುತ್ತದೆ. ಸಮಾಜದಲ್ಲಿ ಜಾಗೃತ ಮನಸ್ಸಿನ ವ್ಯಕ್ತಿಗಳು ಒಂದೂಗೂಡಿ ಸಾಮಾಜಿಕ ಪರಿವರ್ತನೆಯ ಮೂಲಕ ನೈತಿಕಶಕ್ತಿಯನ್ನು ವೃದ್ಧಿಸಬೇಕಾಗಿದೆ.

ಮನುಷ್ಯನ ಸ್ವಭಾವ ಕುರಿತಂತೆ ಮನಃಶಾಸ್ತ್ರಜ್ಞರ ವಿಶ್ಲೇಷಣೆ ಹೀಗಿದೆ. "ಮಾನವನ ಜೀವಿತದ ಗುರಿ ಕಳ್ಳತನವಲ್ಲ ಎಂದು ಹೇಳಲಾಗುವುದಿಲ್ಲ. ವ್ಯಕ್ತಿ ಪ್ರಜ್ಞಾಪೂರ್ವಕನಾಗಿ ಕಳ್ಳತನದ ಸ್ವಭಾವವನ್ನು ನಿಯಂತ್ರಣ ಮಾಡಬೇಕು ಅಥವಾ ಅದನ್ನು ತೊರೆಯಬೇಕು. ಸುಳ್ಳು ಹೇಳುವುದು ಜೀವನದ ಗುರಿಯಲ್ಲ ಎನ್ನುವ ಹಾಗಿಲ್ಲ. ಮುಖ್ಯ ವಿಷಯವೆಂದರೆ ವ್ಯಕ್ತಿ ದೃಢನಿರ್ಧಾರದೊಡನೆ ಸುಳ್ಳು ಹೇಳುವುದನ್ನು ಬಿಡಬೇಕು". ಆತ್ಮಾವಲೋಕನವುಳ್ಳ ವ್ಯಕ್ತಿ ನಿರಂತರವಾಗಿ ಸಾರ್ವತ್ರಿಕಮೌಲ್ಯಗಳ ಪಾಲನೆಯತ್ತ ಗಮನಕೊಡುತ್ತಾನೆ. ಇಂತಹವರ ಸಂಖ್ಯೆ ಹೆಚ್ಚಾದಷ್ಟು ಸಮುದಾಯದಲ್ಲಿ ನೈತಿಕತೆಯ ಪ್ರಭಾವ ಕಾಣಿಸುತ್ತದೆ.

### ವೈದ್ಯಕೀಯ ಕ್ಷೇತ್ರದಲ್ಲಿ ನೈತಿಕತೆಯ ಮಹತ್ವ

ನಾನು ವೃತ್ತಿಯಲ್ಲಿ ವೈದ್ಯನಾದ ಕಾರಣ ವೈದ್ಯಕೀಯ ಕ್ಷೇತ್ರದಲ್ಲಿ ನೈತಿಕತೆಗಿರುವ ಮಹತ್ವವನ್ನು ಕುರಿತು ಚಿಂತಿಸ ಬಯಸುತ್ತೇನೆ. ವೈದ್ಯಕೀಯ ಕ್ಷೇತ್ರದಲ್ಲಿ ನೈತಿಕತೆ ಅನ್ವಯಿಕ ತತ್ವವಾಗಿದೆ. ಟಾಮಾ ಬ್ಯೂ ಚಾಂಪ್ ಮತ್ತು ಜೇಮ್ಸ್ ಚೈಲ್ಡ್ರೆಸ್ ಅವರ 'ಪ್ರಿನಿಪಲ್ಸ್ ಆಫ್ ಬಯೋಮೆಡಿಕಲ್ ಎಥಿಕ್ಸ್' ಗ್ರಂಥದಲ್ಲಿ ನಾಲ್ಕು ತತ್ವಗಳನ್ನು ಹೇಳಲಾಗಿದೆ. ಅವುಗಳೆಂದರೆ "ವೈದ್ಯರು ರೋಗಿಯ ಹಿತದೃಷ್ಟಿಯಿಂದ ಕೆಲಸ ಮಾಡಬೇಕು. ರೋಗಿಗೆ ಚಿಕಿತ್ಸೆಯ ಆಯ್ಕೆಯ ಹಕ್ಕು ನೀಡಬೇಕು. ರೋಗಿಗೆ ಹಾನಿ ಮಾಡದೇ ಒಳ್ಳೆಯದನ್ನು ಉತ್ತೇಜಿಸಬೇಕು. ಆರೋಗ್ಯ ಸೇವೆಗಳು ಸೀಮಿತವಾದ ಸಂದರ್ಭದಲ್ಲಿ ಒತ್ತಡಕ್ಕೊಳಗಾಗದೆ ಸಾವಿನ ಅಂಚಿನಲ್ಲಿರುವ ರೋಗಿಗೆ ಆದ್ಯತೆ ಕೊಡಬೇಕು."

ಕ್ರಿ.ಪೂ. 5ನೆಯ ಶತಮಾನದಲ್ಲಿ 'ಹಿಪೊಕ್ರಿಟಸ್ ಪ್ರಮಾಣ'ವು ವೈದ್ಯಕೀಯ ವೃತ್ತಿಯಲ್ಲಿ ನೈತಿಕತೆಯ ಮಹತ್ವವನ್ನು ಒತ್ತಿ ಹೇಳಿದೆ. 1947ರಲ್ಲಿ ಬಂದ 'ನ್ಯೂರೆಂಬರ್ಗ್ ಕೋಡ್' ಮತ್ತು 1964ರಲ್ಲಿ ಬಂದ 'ದಿ ಡಿಕ್ಲರೇಶನ್ ಆಫ್ ಹೆಲ್ಸಿಂಸಿ' ಸನ್ನದುಗಳು ವೈದ್ಯಕೀಯ ಕ್ಷೇತ್ರದಲ್ಲಿ ನೈತಿಕತೆ ಬೆಳೆಯಲು ಕಾರಣವಾಗಿದೆ. ಇಂಡಿಯನ್ ಮೆಡಿಕಲ್ ಅಸೋಷಿಯನ್ ವೈದ್ಯಕೀಯ ವೃತ್ತಿಯಲ್ಲಿರುವವರು ನೈತಿಕತೆ ರೂಢಿಸಿಕೊಳ್ಳುವ ಅಗತ್ಯವನ್ನು ಹತ್ತಾರು ಸಲ ಹೇಳುತ್ತಿರುತ್ತದೆ. ವೈದ್ಯಕೀಯ ಕ್ಷೇತ್ರದಲ್ಲಿ ರೋಗಿ ಮತ್ತು ವೈದ್ಯರ ಸಂಬಂಧ ನಂಬಿಕೆಯ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ. ಈ ವೃತ್ತಿಯಲ್ಲಿ ನೈತಿಕಪ್ರಜ್ಞೆಯಿಲ್ಲದಿದ್ದರೆ ದೊಡ್ಡ ಅನಾಹುತ ಸಂಭವಿಸುತ್ತದೆ. ವೈದ್ಯಕೀಯ ಕ್ಷೇತ್ರದಲ್ಲಿ ಕಳೆದ ಐವತ್ತು ವರ್ಷಗಳಿಂದಲೂ ದುಡಿಯುತ್ತಾ ಬಂದಿರುವ ನನಗೆ ಶೇಕಡ 90ರಷ್ಟು ವೈದ್ಯರು ತಮ್ಮ ವೃತ್ತಿಧರ್ಮವನ್ನು ಮರೆಯುವುದಿಲ್ಲ. ನೈತಿಕತೆ ಉಳಿಸಿಕೊಂಡು ವೃತ್ತಿಯನ್ನು ನಿರ್ವಹಿಸುತ್ತಿರುತ್ತಾರೆ.

### ಎಲ್ಲಾ ರಂಗದಲ್ಲೂ ನೈತಿಕತೆ ಅಗತ್ಯ

ಈ ನೈತಿಕಪ್ರಜ್ಞೆ ದೇಶದ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಕಂಡುಬರುವ ಅಗತ್ಯವಿದೆ. ಮತದಾರರು ನಂಬಿ ಯಾವುದೇ ರಾಜಕೀಯಪಕ್ಷವನ್ನು ಆಯ್ಕೆ ಮಾಡಿದರೆ, ಆ ಪಕ್ಷ ಮತದಾರರ ನಂಬಿಕೆ ದ್ರೋಹ ಬಗೆದರೆ ನೈತಿಕವಾಗಿ ಆ ಪಕ್ಷ ದಿವಾಳಿಯಾದಂತೆ ಎನ್ನಬಹುದು. ಅದೇ ರೀತಿ ಸಮಾಜದಲ್ಲಿರುವ ಗಣ್ಯವ್ಯಕ್ತಿಗಳು ಸದಾ ತಮ್ಮ ನಡೆ, ನುಡಿಗಳ ಬಗ್ಗೆ ಜಾಗೃತರಾಗಿರಬೇಕು. ತಮ್ಮನ್ನು ಅನೇಕ ನೋಡುತ್ತಿರುತ್ತಾರೆ, ನಾವು ಸಾವಿರಾರು ಜನರ ಪ್ರತಿನಿಧಿಗಳು ಎಂಬುದನ್ನು ಮರೆಯಬಾರದು.

ಒಮ್ಮೆ ಜನಪ್ರತಿನಿಧಿಗಳು ಅಥವಾ ಗಣ್ಯ ವ್ಯಕ್ತಿಗಳಿಂದ ಮೌಲ್ಯಗಳ ಅನುಸರಣೆಯಲ್ಲಿ ತಪ್ಪುಗಳಾದಾಗ ಅದನ್ನು ಖಂಡಿಸಬಾರದು ಎನ್ನುವ ಹಾಗಿಲ್ಲ. ಆ ತಪ್ಪಿಗೆ ಶಿಕ್ಷೆ ಸಹ ನೀಡಬೇಕು. ಯಾರು ತಮ್ಮ ಸ್ವಾರ್ಥಕ್ಕೆ ಅಂತಹ ಘಟನೆಗಳನ್ನು ಬಳಸಿಕೊಳ್ಳಬಾರದು. ಹಾಗೇ ಮಾಡಿದಾಗ ಸಮುದಾಯದ ಹಾಗೂ ದೇಶದ ಘನತೆಗೆ ಕುಂದು ಉಂಟಾಗುತ್ತದೆ. ವ್ಯಕ್ತಿಯಿಂದಾಗಿ ಸಮುದಾಯ ಮತ್ತು ದೇಶ ಕೆಟ್ಟ ಹೆಸರು ಪಡೆಯಬಾರದು. ಕರ್ತವ್ಯಪ್ರಜ್ಞೆಯಿಂದ ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಬೇಕು.

### ನೈತಿಕಪ್ರಜ್ಞೆಯಿದ್ದವರು ಸುಖಿಗಳು

ಮನುಷ್ಯ ತನ್ನ ನಡವಳಿಕೆಗಳನ್ನು ರೂಪಿಸಿಕೊಳ್ಳಲು ಸೆನಕ ಎಂಬ ಚಿಂತಕನ ಮಾತು ಕೇಳಬೇಕು. "ದೇವರು ನೋಡುತ್ತಿದ್ದಾನೆ ಎಂದುಕೊಂಡು ಜನರು ಬದುಕಬೇಕು". ಡಾ.ಎಂ.ಗೋಪಾಲಕೃಷ್ಣ ಅಡಿಗರ ಮಾತುಗಳು ಈ ಸಂದರ್ಭದಲ್ಲಿ ಉಚಿತವೆನಿಸುತ್ತವೆ. "ನೀತಿ,ನಿಯಮಗಳ ಬೇಲಿಗಳಿಲ್ಲದೆ ಸಮಾಜ ಜೀವನವೇ ಅಸಾಧ್ಯ"

ನಿರ್ವಿಕಾರ ಮನಸ್ಸಿನಿಂದ ಹಾಸನದ ಪೆನ್‌ಡ್ರೈವ್ ಪ್ರಸಂಗವನ್ನು ನೋಡಬೇಕು. ಇದು ವೈದ್ಯಕೀಯ ಮನಃಶಾಸ್ತ್ರಕ್ಕೆ ಸಂಬಂಧಪಟ್ಟ ಪ್ರಕರಣ. ಇದರಲ್ಲಿ ಅಪರಾಧಿಯನ್ನು ಸಾಕ್ಷ್ಯಾಧಾರಗಳಿಂದ ನಿರ್ಣಯ ಮಾಡಲು ಸಾಧ್ಯವಿಲ್ಲ. ಅದಕ್ಕೆ ಬದಲಾಗಿ ಅಪರಾಧ ಕೃತ್ಯಕ್ಕೆ ಕಾರಣವಾದ ತಾತ್ವಿಕತೆಯ ಬಗ್ಗೆ ಅಧ್ಯಯನ ಮಾಡಬೇಕಾಗುತ್ತದೆ. ಕೃತ್ಯ ಎಸಗಿದವರ ಸಮಾಜದ ವಾತಾವರಣ, ಸಂಸ್ಕೃತಿ, ಶಿಕ್ಷಣ ವ್ಯವಸ್ಥೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದ ಮನಃಸ್ಥಿತಿ ಹಾಗೂ ಮೆದುಳಿನ ಸಮಸ್ಯೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ.

ದೇಶದಲ್ಲಿ ಚುನಾವಣೆಗಳನ್ನು ನೈತಿಕ ತತ್ವದ ಮೇಲೆ ನಡೆಸಲು ಸಾಕಷ್ಟು ಅವಕಾಶವಿದೆ. ಭಾರತದ ರಾಜಕೀಯಪಕ್ಷಗಳು ಮತದಾರರ ನೈತಿಕಪ್ರಜ್ಞೆಯ ಮೇಲೆ ವಿಶ್ವಾಸವಿಟ್ಟಿಲ್ಲ. ಅವರನ್ನು ಸದಾ ಭ್ರಷ್ಟರನ್ನಾಗಿಸಲು ಸದಾ ಹವಣಿಸುತ್ತಿವೆ.

ಯಾವುದೇ ಕ್ರಿಯಾಶೀಲ ಮತ್ತು ಪ್ರಗತಿಪರ ಸಮಾಜಕ್ಕೆ ನೈತಿಕತೆ ಅತ್ಯಂತ ಅಗತ್ಯ ಗುಣಗಳಾಗಿವೆ. ಭಗವಾನ್ ಬುದ್ಧನ ತತ್ವಗಳಲ್ಲಿ ನೈತಿಕತೆಯ ಮಹತ್ವ ಅಡಕವಾಗಿದೆ. "ನೈತಿಕತೆ ಒಂದು ಮೌಲ್ಯವಾಗಿದೆ. ಇದು ವ್ಯಕ್ತಿ ಸಂತೋಷದ ಜೀವನ ನಡೆಸಲು ನಡವಳಿಕೆಯನ್ನು ರೂಪಿಸುತ್ತದೆ. ನೈತಿಕತೆಯಿದ್ದರೆ ಪ್ರಾಮಾಣಿಕವಾಗಿ ಬದುಕುತ್ತಾನೆ. ಸುತ್ತಮುತ್ತಲಿರುವವರೊಂದಿಗೆ ಸ್ನೇಹ ಮತ್ತು ನಂಬಿಕೆ ಬೆಳೆಸಿಕೊಳ್ಳುತ್ತಾನೆ. ನೈತಿಕತೆ ಸಂತೋಷದ ಕೀಲಿ ಕೈ".

■ **ನಿರೂಪಣೆ: ಶ್ರೀವತ್ಸ**

**ಪತ್ರಿಕೆಯ ಬಳಗ**

ಸಹಾಯಕ ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು:
**ಎನ್. ಆನಂದ**

ಪುಟ ವಿನ್ಯಾಸ:
**ಸುಮಾ ಸಾಗರ್**




ಕೆಲ ದೇಶಗಳು ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಸಾಮಾನ್ಯ ಪ್ರಜೆ ಆರೋಗ್ಯ ಸೇವೆ ಪಡೆಯಲು ಅರ್ಹವಾಗಿದ್ದಾನೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಕಾನೂನು ಜಾರಿಗೆ ತಂದಿಲ್ಲ, ತರುವ ಸುಳಿವನ್ನು ನೀಡಿಲ್ಲ. ಅಂಕಿ ಅಂಶಗಳ ಪ್ರಕಾರ ವಿಶ್ವದ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚಿನ ಜನರು 2021ರಲ್ಲಿ ಅಗತ್ಯ ಆರೋಗ್ಯ ಸೇವೆ ಪಡೆಯಲು ಸಾಧ್ಯವಾಗಿಲ್ಲ.

ಮನದ ಮಾತು



**ಡಾ. ರಮಣ ಎಂ ಹುಲಿನಾಯ್ಕರ್**
**ಕಾರ್ಯನಿರ್ವಾಹಕ ಸಂಪಾದಕರು**
**ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಕಾಲೇಜು**

## ವಿಶ್ವಸಂಸ್ಥೆಯ 2024ರ ಘೋಷವಾಕ್ಯ

# ನನ್ನ ಆರೋಗ್ಯ ನನ್ನ ಹಕ್ಕು...!

ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಸಹೋದರ ಸಂಸ್ಥೆಗಳಾದ ಶ್ರೀದೇವಿ, ರಮಣ ಮಹರ್ಷಿ ಮತ್ತು ದುರ್ಗಾಂಬಾ ನರ್ಸಿಂಗ್ ಕಾಲೇಜುಗಳ ವತಿಯಿಂದ 2024ರ ಏಪ್ರಿಲ್ 19ರಂದು 'ವಿಶ್ವ ಆರೋಗ್ಯ ದಿನ'ವನ್ನು ಆಚರಿಸಲಾಯಿತು.

ತುಮಕೂರು ಹಿರಿಯ ನ್ಯಾಯವಾದಿ ಡಾ.ಮಂಜುಪ್ರಕಾಶ್ ಹಾಗೂ ಶ್ರೀದೇವಿ ವೈದ್ಯಕೀಯ ಕಾಲೇಜಿನ ಸಮುದಾಯ ವೈದ್ಯಕೀಯ ವಿಭಾಗದ ಸಹಾಯಕ ಪ್ರಾಧ್ಯಾಪಕರು ಮತ್ತು ತುಮಕೂರಿನ ಐಎಂಎ ಅಧ್ಯಕ್ಷರಾಗಿರುವ ಡಾ.ರಂಗಸ್ವಾಮಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

"ನನ್ನ ಆರೋಗ್ಯ ನನ್ನ ಹಕ್ಕು...!" ವಿಶ್ವ ಆರೋಗ್ಯ ದಿನದ ಈ ವರ್ಷದ ಘೋಷವಾಕ್ಯವಾಗಿದೆ.




ವಿಶೇಷ ಎಂದರೆ, ಕನಿಷ್ಠ 140 ದೇಶಗಳು ತಮ್ಮ ಸಂವಿಧಾನದಲ್ಲಿ ಆರೋಗ್ಯವನ್ನು ಮಾನವಹಕ್ಕು ಎಂದು ಪರಿಗಣಿಸಿವೆ ಎಂಬುದನ್ನು 'ವಿಶ್ವ ಆರೋಗ್ಯ ಸಂಸ್ಥೆ' (WHO) ಗುರುತಿಸಿದೆ. ಇದರಿಂದ ವಿಶ್ವದ ಆರೋಗ್ಯಕ್ಷೇತ್ರ ವಿಶೇಷವಾದ ಮಹತ್ವ ಪಡೆದಿದೆ. ಆದರೂ ಕೆಲ ದೇಶಗಳು ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಸಾಮಾನ್ಯ ಪ್ರಜೆ ಆರೋಗ್ಯ ಸೇವೆ ಪಡೆಯಲು ಅರ್ಹವಾಗಿದ್ದಾನೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಕಾನೂನು ಜಾರಿಗೆ ತಂದಿಲ್ಲ, ತರುವ ಸುಳಿವನ್ನು ನೀಡಿಲ್ಲ. ಅಂಕಿ ಅಂಶಗಳ ಪ್ರಕಾರ ವಿಶ್ವದ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚಿನ ಜನರು 2021ರಲ್ಲಿ ಅಗತ್ಯ ಆರೋಗ್ಯ ಸೇವೆ ಪಡೆಯಲು ಸಾಧ್ಯವಾಗಿಲ್ಲ.

ಎಲ್ಲಾ ರಾಷ್ಟ್ರಗಳು ತನ್ನ ಪ್ರಜೆಗಳ ಆರೋಗ್ಯಕ್ಕಾಗಿ ತನ್ನ ದೇಶದ ಜಿ.ಡಿ.ಪಿ.ಯ ಕನಿಷ್ಠ ಶೇಕಡ 5ರಷ್ಟು ಸಂಪನ್ಮೂಲವನ್ನು ಖರ್ಚು ಮಾಡಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆ ಶಿಫಾರಸ್ಸು ಮಾಡಿದೆ. ಆದರೆ ಸಂಪನ್ಮೂಲ ಹಂಚಿಕೆ ಸಂದರ್ಭ ಬಂದಾಗ ಹಲವು ದೇಶಗಳು ಅದನ್ನು ಅನುಷ್ಠಾನ ಮಾಡುವಲ್ಲಿ ವಿಫಲವಾಗಿವೆ.

ಭಾರತವು ತನ್ನ (2020) ಜಿ.ಡಿ.ಪಿ.ಯ ಕನಿಷ್ಠ ಶೇಕಡ 1.35ರಷ್ಟನ್ನು ಆರೋಗ್ಯಕ್ಕಾಗಿ ಖರ್ಚು ಮಾಡುತ್ತಿದೆ. ಭಾರತ 2024–2025ನೇ ಸಾಲಿನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಕೊಡುವ ಅನುದಾನದ ಹಂಚಿಕೆ ಶೇಕಡ 2ರಷ್ಟು ನಿಗದಿ ಮಾಡಿದೆ. ಅಮೆರಿಕ ಶೇಕಡ 16.6, ಜರ್ಮನಿ ಶೇಕಡ 12.7, ಕೆನಡಾ, ಜಪಾನ್ ಮತ್ತು ಫ್ರಾನ್ಸ್ ದೇಶಗಳು ಶೇಕಡ 10ಕ್ಕಿಂತ ಹೆಚ್ಚಿನ ಸಂಪನ್ಮೂಲವನ್ನು ಅರೋಗ್ಯ ಕ್ಷೇತ್ರಕ್ಕೆ ಒದಗಿಸಿದೆ.

ಭಾರತದಲ್ಲಿ ಆರೋಗ್ಯದ ಕಾಳಜಿಯು ಈವರೆಗೂ ಖರೀದಿ ಮಾಡುವ ಸರಕು ಮತ್ತು ಸವಲತ್ತು ಮಾತ್ರವಾಗಿದೆ. ಆರೋಗ್ಯ ನಿರ್ವಹಣೆಗಾಗಿ ಪ್ರತಿಯೊಬ್ಬನ ಆದಾಯದ ಶೇಕಡ 47ರಷ್ಟು ಹಣ ಖರ್ಚಾಗುತ್ತಿದೆ. ಒಂದು ವೇಳೆ ದೊಡ್ಡ ಕಾಯಿಲೆ ಅಥವಾ ರೋಗಕ್ಕೆ ಯಾವುದೇ ವ್ಯಕ್ತಿ ತುತ್ತಾದರೆ ಆ ಕುರಿತ ವೈದ್ಯಕೀಯ ವೆಚ್ಚಗಳಿಂದಾಗಿ ಮಧ್ಯಮ ವರ್ಗದ ಆತನ ಕುಟುಂಬ ಸಂಪೂರ್ಣವಾಗಿ ಸಾಲದ ಸುಳಿಗೆ ಸಿಲುಕಿ ಬಡತನಕ್ಕೆ ತಳ್ಳಲ್ಪಡುತ್ತದೆ.

ಯಾವುದೇ ದೇಶದ ಆರ್ಥಿಕತೆ ಪ್ರಗತಿಯಾಗಬೇಕಾದರೆ, ಜನರಲ್ಲಿ ಕೊಳ್ಳುವ ಸಾಮರ್ಥ್ಯ ಸುಧಾರಿಸಬೇಕು. ಜನರು ಮೊದಲು ಆಹಾರ ಮತ್ತು ವಸತಿಯಂತಹ ಮೂಲಭೂತ ಅಗತ್ಯಗಳಿಗಾಗಿ ಖರ್ಚು ಮಾಡುತ್ತಾರೆ. ಅನಂತರ ಆರೋಗ್ಯ ಮತ್ತು ಶಿಕ್ಷಣಕ್ಕಾಗಿ ವ್ಯಯ ಮಾಡುತ್ತಾರೆ. ತದನಂತರ ಆತ ತನ್ನ ಆದಾಯವನ್ನು ಆರ್ಥಿಕತೆಯ ಕ್ಷಿಪ್ರ ಪ್ರಗತಿಗೆ ಕೊಡುಗೆ ನೀಡಬಹುದಾದ ಇತರೆ ಬಾಬ್ತುಗಳ ಮೇಲೆ ವೆಚ್ಚ ಮಾಡುತ್ತಾನೆ. ಭಾರತದಲ್ಲಿ ಜನರು ಇನ್ನೂ ಮೂಲಭೂತ ಅಗತ್ಯಗಳ ಮೇಲೆ ತಮ್ಮ ಗಮನ ಕೇಂದ್ರೀಕರಿಸುತ್ತಿದ್ದಾರೆ. ಅವರು ಈ ಸವಲತ್ತುಗಳನ್ನು ಪಡೆದ ಮೇಲೆ ಆರೋಗ್ಯ ಮತ್ತು ಶಿಕ್ಷಣದ ಕಡೆ ಗಮನ ನೀಡುತ್ತಾರೆ.

ಜನತೆಯ ಆರೋಗ್ಯ ರಕ್ಷಣೆ ರಾಷ್ಟ್ರದ ಪ್ರಮುಖ ಜವಾಬ್ದಾರಿಯಾಗಿದೆ. ಅದಕ್ಕೆ ಕನಿಷ್ಠ ಪ್ರಾಮುಖ್ಯ ನೀಡಲಾಗಿದೆ. ಆರೋಗ್ಯವಂತ ನಾಗರಿಕರು ದೇಶದ ಉನ್ನತಿಗೆ ಉತ್ತಮ ಕೊಡುಗೆ ನೀಡಬಲ್ಲರು. ಇದನ್ನು ಒತ್ತಿ ಹೇಳಲೆಂದೇ ವಿಶ್ವ ಆರೋಗ್ಯ ಸಂಸ್ಥೆ ವಿಶ್ವಕ್ಕೆ "ನನ್ನ ಆರೋಗ್ಯ ನನ್ನ ಹಕ್ಕು" ಎನ್ನುವ ಘೋಷವಾಕ್ಯ ನೀಡಿದೆ.

ವಿಶ್ವ ಆರೋಗ್ಯ ಸಂಸ್ಥೆ ಶಿಫಾರಸ್ಸು ಮಾಡಿರುವ ಶೇಕಡ 5ರಷ್ಟು ಹಣವನ್ನೂ ಬಜೆಟ್‌ನಲ್ಲಿ ಒದಗಿಸದ ಭಾರತ ಸರ್ಕಾರವು ಶೇಕಡ 2ರಷ್ಟು ಅನುದಾನವನ್ನು ಹಂಚಿಕೆ ಮಾಡುವ ಮೂಲಕ ಜನತೆಯ ಆರೋಗ್ಯ ರಕ್ಷಣೆಯಲ್ಲಿ ಬಹಳ ಹಿಂದುಳಿದಿದೆ. ಇನ್ನು ಅಮೆರಿಕಾದಂತಹ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಶೇಕಡ 10ರಷ್ಟು ಮೊತ್ತವನ್ನು ಆರೋಗ್ಯಕ್ಷೇತ್ರಕ್ಕಾಗಿ ವೆಚ್ಚ ಮಾಡುತ್ತಿದೆ. ಭಾರತವು ಅದಕ್ಕೆ ಸರಿಸಮಾನಕ್ಕೆ ಬರುವುದು ಬಹಳ ದೂರದ ಮಾತು ಎನ್ನಬಹುದು.

ಇದೆಲ್ಲವನ್ನೂ ಹೇಳುತ್ತಾ "ಇಂಗ್ಲೆಂಡ್ ದೇಶದ ರಾಷ್ಟ್ರೀಯ ಆರೋಗ್ಯ ಸೇವೆಗಳ (ಎನ್.ಹೆಚ್.ಎಸ್.) ಉದಾಹರಣೆಯಿಂದ ಸ್ಪಷ್ಟೀಕರಿಸಲ್ಪಟ್ಟಿರುವ ಸಂಗತಿಯೆಂದರೆ ಯಾವುದೇ ದೇಶದ ಸರ್ಕಾರವು ಏಕೈಕ ಜವಾಬ್ದಾರನಾಗಿ ದೀರ್ಘಕಾಲ ತನ್ನ ನಾಗರಿಕರ ಆರೋಗ್ಯದ ಕಾಳಜಿಯನ್ನು ನಿರ್ವಹಣೆ ಮಾಡುವುದು ಕಾರ್ಯಸಾಧ್ಯವಲ್ಲ" ಎಂದು ಹೇಳಲು ಬಯಸುತ್ತೇನೆ.

ಇಂಗ್ಲೆಂಡ್ ತನ್ನ ಜನರಿಂದ ರಾಷ್ಟ್ರೀಯ ಸಂಪತ್ತು ಎಂದು ಪರಿಗಣಿಸಲ್ಪಡುತ್ತಿದ್ದ ಎನ್.ಹೆಚ್.ಎಸ್. ಈಗ ಒಂದು ದೊಡ್ಡ ಬಿಕ್ಕಟ್ಟಿನಲ್ಲಿದೆ. ಅಲ್ಲಿ ಅರ್ಹ ಒಬ್ಬ ರೋಗಿಗೆ ಮೊಣಕಾಲುಗಳ ಬದಲಿ ಶಸ್ತ್ರಚಿಕಿತ್ಸೆಗೆ ಕಾಯುವ ಸಮಯವೇ ಎರಡು ವರ್ಷ ಹಿಡಿಯುತ್ತದೆ. ಇತರೆ ಆಪರೇಷನ್ ಮತ್ತು ಹೊರರೋಗಿಗಳಾಗಿ ಮಾಡುವ ವೆಚ್ಚ ಸುಮಾರು 9 ಲಕ್ಷ. ಎನ್.ಹೆಚ್.ಎಸ್. ನಿಭಾಯಿಸಲು ಹೆಣಗಾಡುತ್ತಿರುವುದಕ್ಕೆ ಐದು ಪ್ರಾಥಮಿಕ ಕಾರಣಗಳಿವೆ. ಅವುಗಳೆಂದರೆ

1. ಸಿಬ್ಬಂದಿ ಯೋಗಕ್ಷೇಮ (ಸಿಬ್ಬಂದಿ ಕೊರತೆ ಮತ್ತು ಕೋವಿಡ್ ನಂತರದಲ್ಲಿ ಸಿಬ್ಬಂದಿ ಮೇಲೆ ಒತ್ತಡ ಬೀರಿರುವ ಪರಿಣಾಮ),
2. ಕಡಿಮೆ ಹಣದ ಸಾಮಾಜಿಕ ಆರೈಕೆ (ವಯಸ್ಸಾದವರ ಜನಸಂಖ್ಯೆ ಹೆಚ್ಚಳವಿರುವುದರಿಂದ ಆರೋಗ್ಯ ರಕ್ಷಣೆ ಸೇವೆಗಳ ಮೇಲೆ ಬೀರುತ್ತಿರುವ ಪರಿಣಾಮ. ಆಸ್ಪತ್ರೆಯಿಂದ ಬಿಡುಗಡೆಗೊಂಡ ರೋಗಿಗಳ ನಿರಂತರ ಆರೈಕೆಗೆ ಆರೋಗ್ಯ ಸೇವೆಗಳು ಸಾಕಾಗುತ್ತಿಲ್ಲ).
3. ಅಸಮರ್ಪಕ ಕಾರ್ಯಪಡೆ (ಆರೋಗ್ಯ ರಕ್ಷಣೆಯ ಅನುದಾನ ಹಂಚಿಕೆಯಲ್ಲಿ ಹೆಚ್ಚಳದ ಹೊರತಾಗಿಯೂ, ಸಮರ್ಪಕವಾದ ಬಳಕೆ ಮತ್ತು ಹಂಚಿಕೆ ಸರಿಯಾಗಿಲ್ಲ).
4. ತುರ್ತು ಆರೈಕೆ ಲಭ್ಯತೆಯ ಕೊರತೆ
5. ಪ್ರಸ್ತುತ ಅರೋಗ್ಯಕ್ಷೇತ್ರದ ಸಿಬ್ಬಂದಿ ಕೈಗಾರಿಕಾ ಕ್ಷೇತ್ರದ ಸಿಬ್ಬಂದಿಗಳಂತೆ ಕಡಿಮೆ ವೇತನ ಮತ್ತು ಸೌಲಭ್ಯವೆಂದು ಪದೆಪದೇ ನಡೆಸುವ ಮುಷ್ಕರಗಳು.

ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಮತ್ತು ಇನ್ನೂ ಅಭಿವೃದ್ಧಿ ಹೊಂದುತ್ತಿರುವ ಭಾರತ ದೇಶವು ಇಂದಿನ ಪರಿಸ್ಥಿತಿಯಲ್ಲಿ ಆರೋಗ್ಯಕ್ಷೇತ್ರದ ಮೇಲೆ ಮಾತ್ರ ಗಮನವನ್ನು ಕೇಂದ್ರೀಕರಿಸಲು ಸಾಧ್ಯವಿಲ್ಲ. ಆ ಕಾರಣ ಖಾಸಗಿ ಆರೋಗ್ಯ ಸೇವೆ ಬಹಳಷ್ಟು ಅಭಿವೃದ್ಧಿ ಹೊಂದುತ್ತಿರುವುದು ಅಷ್ಟೇ ಅಲ್ಲ ಅದು ತಾಲೂಕು ಮಟ್ಟಕ್ಕೆ ತಲುಪಿರುವುದು ಸ್ವಾಗತಾರ್ಹ ಲಕ್ಷಣವಾಗಿದೆ. ಖಾಸಗಿ ಆರೋಗ್ಯಕ್ಷೇತ್ರ ಸರ್ಕಾರದ ಜವಾಬ್ದಾರಿಯನ್ನು ಹಂಚಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು ಸಹ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ವಿಫಲವಾಗಿರುವುದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಆ ಸಂದರ್ಭದಲ್ಲಿ ಭಾರತವು ತಕ್ಕಮಟ್ಟಿಗೆ ಉತ್ತಮವಾಗಿ ಕಾರ್ಯನಿರ್ವಹಿಸಿದೆ. ನಗರಗಳ ದೊಡ್ಡ ಆಸ್ಪತ್ರೆ ಅಥವಾ ಸಣ್ಣ–ಪಟ್ಟಣದ ಆಸ್ಪತ್ರೆ ಮತ್ತು ಖಾಸಗಿ ನರ್ಸಿಂಗ್ ಹೋಮ್‌ಗಳು ಮಾಡಿದ ಸೇವೆಯಿಂದಾಗಿ ಸರ್ಕಾರಿ ಆಸ್ಪತ್ರೆಗಳ ಮೇಲಿನ ಒತ್ತಡ ಕಡಿಮೆಯಾಗಿದೆ. ಹೆಚ್ಚಿನ ಸಂಖ್ಯೆಯ ಹಾಸಿಗೆ ಮತ್ತು ಬಹುಶಿಸ್ತಿನ ತರಬೇತಿ ಪಡೆದ ವೈದ್ಯಕೀಯ ಸಿಬ್ಬಂದಿಯನ್ನು ಹೊಂದಿದ್ದ ಆಸ್ಪತ್ರೆಗಳು ಕೋವಿಡ್ ಹೊರೆಯನ್ನು ನಿಜವಾಗಿಯೂ ಉತ್ತಮವಾಗಿ ನಿರ್ವಹಿಸಿದೆ. ಕೋವಿಡ್ ನಿರ್ವಹಣೆಯಲ್ಲಿ ರಾಷ್ಟ್ರದಾದ್ಯಂತವಿರುವ ಖಾಸಗಿ ವೈದ್ಯಕೀಯ ಕಾಲೇಜುಗಳ ಪಾತ್ರವನ್ನೂ ಮರೆಯುಂತಿಲ್ಲ.

ವೈದ್ಯಕೀಯ ತುರ್ತು ಸಂದರ್ಭದಲ್ಲಿ ಜನರು ಸ್ಥಳೀಯ ಸರ್ಕಾರಿ ಆಸ್ಪತ್ರೆಯ ಬದಲಿಗೆ ಹತ್ತಿರದ ಖಾಸಗಿ ನರ್ಸಿಂಗ್ ಹೋಮ್ ಅಥವಾ ಆಸ್ಪತ್ರೆಗೆ ಬರುತ್ತಾರೆ. ಇದು ಖಾಸಗಿ ಆರೋಗ್ಯಘಟಕದಿಂದ ಖಚಿತ ಗುಣಮಟ್ಟ ಹಾಗೂ ವಿಶ್ವಾಸಾರ್ಹತೆಯುಳ್ಳ ಸೇವೆ ದೊರೆಯುತ್ತಿರುವುದರ ಸೂಚಕವಾಗಿದೆ. ಆದರೂ ಸಹ ಖಾಸಗಿ ಆರೋಗ್ಯ ಸಂಸ್ಥೆಗಳನ್ನು ನಕರಾತ್ಮಕವಾಗಿ ನೋಡಲಾಗುತ್ತದೆ.

ಇದು ಹೆಚ್ಚಾಗಿ ವೈಯಕ್ತಿಕ ಅಥವಾ ರಾಜಕೀಯ ಹಿತಾಸಕ್ತಿಗಳ ಸಂರಕ್ಷಕರಾಗಿ ತಮ್ಮನ್ನು ತಾವು ಸಮರ್ಥಿಸಿಕೊಳ್ಳುವ ಕೆಲವು ಮಾಧ್ಯಮ ಮತ್ತು ರಾಜಕೀಯ ಸಂಸ್ಥೆಗಳು ಈ ಘಟಕಗಳನ್ನು ನಿರ್ಲಕ್ಷ್ಯ ಮತ್ತು ಹಣಸಂಪಾದನೆಯ ರಾಕ್ಷಸೀಸಂಸ್ಥೆಗಳೆಂದು ಅಪಪ್ರಚಾರ ಮಾಡುವುದು ಉಂಟು. ಇಲ್ಲಿ ತಪ್ಪುಗಳಾದಾಗ ಯಾರೂ ಅದನ್ನು ಸಮರ್ಥಿಸುವುದಿಲ್ಲ. ಆದರೆ ಅವರ ಸೇವೆಯನ್ನು ನಿರ್ಲಕ್ಷ್ಯ ಮಾಡಬಾರದು ಎನ್ನುವುದು ಮೂಲಭೂತ ವಿಷಯ.

ಸಮಾಜಕ್ಕೆ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ದೇಶದಾದ್ಯಂತ ಖಾಸಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ನಿರ್ವಹಿಸುತ್ತಿರುವ ಪಾತ್ರವನ್ನು ಯಾರು ಗಂಭೀರವಾಗಿ ಪರಿಗಣಿಸಿಲ್ಲ. ಉದಾಹರಣೆಗೆ ಹೇಳುವುದಾದರೆ ನಮ್ಮ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಉಚಿತವಾಗಿ ಹೊರರೋಗಿ ಸಮಾಲೋಚನೆ ಹಾಗೂ ಒಳರೋಗಿ ಸೇವೆಗಳನ್ನು ಒದಗಿಸುತ್ತದೆ. ಕೆಲವು ಸಾಮಾನ್ಯ ರಕ್ತ ಪರೀಕ್ಷೆ ಮತ್ತು ಎಕ್ಸ್–ರೇ ಮುಂತಾದ ಪರೀಕ್ಷೆಗಳನ್ನು ಯಾವುದೇ ವೆಚ್ಚವಿಲ್ಲದೆ ಮಾಡಲಾಗುತ್ತದೆ. ಅತ್ಯಗತ್ಯವಾದ ಔಷಧಿಗಳನ್ನು ಸಹ ಉಚಿತವಾಗಿ ನೀಡಲಾಗುತ್ತದೆ. ಇಷ್ಟು ಮಾತ್ರವಲ್ಲ, ಇದು 'ಆಯುಷ್ಮಾನ್ ಭಾರತ್' (ಬಿಪಿಎಲ್ ಕಾರ್ಡ್ ಹೊಂದಿರುವವರು) ಮತ್ತು ಶಸ್ತ್ರಚಿಕಿತ್ಸಾ ಕಾರ್ಯವಿಧಾನಗಳಿಗಾಗಿ ಯಶಸ್ವಿನಿ, ನವಜಾತ ಶಿಶುಗಳು ಮತ್ತು ಮಕ್ಕಳ ಕಾರ್ಯವಿಧಾನಗಳಿಗೆ ಬಾಲ ಸಂಜೀವಿನಿ, ನಗದು ರಹಿತ ಇಎಸ್‌ಐ ಆರೋಗ್ಯ ಸೇವೆಗಳನ್ನು ಒದಗಿಸಲಾಗಿದೆ. ಇಲ್ಲಿನ ರೋಗಿಗಳಿಗೆ ಎಲ್ಲಾ ಸೇವೆಯನ್ನು ಉಚಿತವಾಗಿ ನೀಡಲಾಗುತ್ತದೆ. ಆಸ್ಪತ್ರೆ ವತಿಯಿಂದ ವಾರಕ್ಕೊಮ್ಮೆ ಉಚಿತ ಆರೋಗ್ಯ ತಪಾಸಣೆ ಶಿಬಿರಗಳನ್ನು ನಡೆಸುತ್ತಿದೆ. ಜಿಲ್ಲೆಯ ಸುತ್ತಮುತ್ತಲಿನ ದೂರದ ಪ್ರದೇಶ ಮತ್ತು ಹಳ್ಳಿಗಳಲ್ಲಿ ರಾಷ್ಟ್ರೀಯ ಆರೋಗ್ಯ ಉಪಕ್ರಮಗಳ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಮೂಲಕ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆ ರಾಜ್ಯಸರ್ಕಾರದ ಆರೋಗ್ಯ ರಕ್ಷಣೆಯ ಹೊರೆಯನ್ನು ತಾನೂ ಹಂಚಿಕೊಳ್ಳುತ್ತಿದೆ.

ವಿಶ್ವ ಆರೋಗ್ಯ ಸಂಸ್ಥೆಯ ಹಲವು ಜಾಗೃತಿ ಘೋಷವಾಕ್ಯಗಳ ಮೂಲ ಉದ್ದೇಶ ಎಲ್ಲರಿಗೂ ಆರೋಗ್ಯ ಎಂಬುದೇ ಆಗಿದೆ. ಈಗ ಅದು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಮಾತ್ರವಲ್ಲ, "ನನ್ನ ಆರೋಗ್ಯ ನನ್ನ ಹಕ್ಕು" ಎಂಬುದರ ಕಡೆಗೆ ಸಮುದಾಯವನ್ನು ಕರೆದುಕೊಂಡು ಹೋಗಬೇಕಾಗಿದೆ. ನಂತರ ಸಮುದಾಯವೇ ಸರ್ಕಾರವನ್ನು ಆರೋಗ್ಯಸೇವೆ ಕೊಡುವಂತೆ ಒತ್ತಾಯಿಸುತ್ತದೆ. ಜನರು ತಮ್ಮ ಚುನಾಯಿತ ಸರ್ಕಾರಗಳಿಂದ ಆರೋಗ್ಯವನ್ನು ತಮ್ಮ ಮೂಲಭೂತ ಹಕ್ಕುಗಳಾಗಿ ಮಾಡಲು ಒತ್ತಾಯಿಸಿದರೆ ಆರೋಗ್ಯ ಕ್ಷೇತ್ರ ತನ್ನ ಮಹತ್ವವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಇಂತಹ ಹಕ್ಕುಗಳನ್ನು ಕೊಡುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ.

ನಮ್ಮ ದೇಶವು ಈಗಾಗಲೇ ಅಭಿವೃದ್ಧಿ ಹೊಂದಿದ ಮತ್ತು ತಳಮಟ್ಟದ ಸ್ಥಾಪಿತ ಖಾಸಗಿ ಆರೋಗ್ಯ ಸೇವೆ ಒದಗಿಸುವವರನ್ನು, ವಿಶೇಷವಾಗಿ ಖಾಸಗಿ ವೈದ್ಯಕೀಯ ಕಾಲೇಜುಗಳ ಆಸ್ಪತ್ರೆಯವರನ್ನು ದೂರವಿಡುವ ಬದಲು ವಿಶ್ವಾಸಕ್ಕೆ ತೆಗೆದುಕೊಂಡರೆ ಆರೋಗ್ಯ ರಕ್ಷಣಾ ನೀತಿಗಳನ್ನು ಅನುಷ್ಠಾನ ಮಾಡುವುದು ಸುಲಭವಾಗುತ್ತದೆ. ಆಗ ಖಾಸಗಿ ಆರೋಗ್ಯ ಸೇವೆ ಒದಗಿಸುವವರು ಸಮಾಜದ ಎಲ್ಲಾ ವರ್ಗಗಳಿಗೆ ಸೇವೆ ಸಲ್ಲಿಸಲು ಸಾಧ್ಯವಾಗುತ್ತದೆ.

▪ **ಕನ್ನಡಕ್ಕೆ: ಬಿ.ಎಂ.ಸುನೀತಾ**

# ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪೈಥಾನ್ ಫಾರ್ ಡೇಟಾ ಸೈನ್ಸ್ ಕಾರ್ಯಾಗಾರ




ನಗರದ ಪ್ರತಿಷ್ಠಿತ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಕೌಶಲ್ಯ ಅಭಿವೃದ್ಧಿ ಕೇಂದ್ರದ ಸಹಯೋಗದಲ್ಲಿ ಏಪ್ರಿಲ್ 29ರಿಂದ ಮೇ 4ರ ತನಕ ಪ್ರಥಮ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗಾಗಿ ಒಂದು ವಾರದ ಪೈಥಾನ್ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ ಅವರು “ಇಂದಿನ ಡಿಜಿಟಲ್ ಯುಗದಲ್ಲಿ ಪೈಥಾನ್ ಲಾಂಗ್ವೇಜ್ ಕಲಿಕೆ ತುಂಬಾ ಅತ್ಯವಶ್ಯ. ಪೈಥಾನ್ ಒಂದು ಪರಿಷ್ಕೃತ ಸಾಧನಾ ಭಾಷೆಯಾಗಿದೆ, ಅದು ಸರಳವಾಗಿ ಓದಲು, ಬರೆಯಲು ಮತ್ತು ಕೋಡ್ ಅನ್ನು ಕಂಪೈಲ್ ಮಾಡಲು ಬಹಳ ಸುಲಭವಾಗಿ ಬಳಸಬಹುದಾಗಿದೆ. ಅದನ್ನು ಡೇಟಾ ವಿಶ್ಲೇಷಣೆಯ ಕ್ಷೇತ್ರದಲ್ಲಿ ಬಳಸುವುದು ಹೊರತು, ಅದು ವ್ಯಾಪಾರಿಕ ಪ್ರಯೋಗಕ್ಕಾಗಿ ಅಥವಾ ದೊಡ್ಡ ಸ್ಕೇಲ್ ಪ್ರೊಜೆಕ್ಟ್‌ಗಳಿಗೆ ಬಳಸುವುದಕ್ಕೆ ಅತ್ಯಂತ ಅನುಕೂಲ. ಸಾಫ್ಟ್‌ವೇರ್ ಕಂಪೆನಿಗಳ ಅಗತ್ಯ ತಕ್ಕಂತೆ ನಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ಆರು ದಿನಗಳ ಪೈಥಾನ್ ಫಾರ್ ಡೇಟಾ ಸೈನ್ಸ್ ಕಾರ್ಯಾಗಾರವನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು” ಎಂದ ಕರೆ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾದ ಲೋಗನಾಥನ್ ಹಾಗೂ ಕ್ಯೂ ಸ್ಪೈಡರ್ಸ್ ಕಂಪನಿಯ ಶೇಖ್ ತಾಜುದ್ದೀನ್, ಪ್ರೊ.ಉಮೇಶ್‌ಬಿ ಎಲ್. ಪ್ರೊ. ಚೇತನ್ ಅವರುಗಳು ಉಪಸ್ಥಿತರಿದ್ದರು.

ಕಾರ್ಯಾಕ್ರಮ ಯಶಸ್ವಿಯಾಗಿ ಆಯೋಜಿಸಿದ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ವಿಭಾಗದ ಮುಖ್ಯಸ್ಥರು ಹಾಗೂ ಕೌಶಲ್ಯ ಅಭಿವೃದ್ಧಿ ಕೇಂದ್ರದ ಸಂಯೋಜಕರಾದ ಡಾ. ಗಿರೀಶ್ ಎಲ್, ಕಂಪ್ಯೂಟರ್ ಸೈನ್ಸ್ ಮುಖ್ಯಸ್ಥರಾದ ಡಾ.ಬಸವೇಶ ಡಿ, ಡಾ.ದಿನೇಶ ಎಚ್ ಎ. ಡಾ.ಕೃಷ್ಣ ಆನಂದ, ಪ್ರೊ.ಕೊಟ್ರಮ್ಮ, ವ್ಯವಸ್ಥಾಪಕರಾದ ಮಾಂತೇಶ, ಶ್ರೀಟೆಕ್ ಇನ್ನೊವೇಶನ್ ಇಂಜಿನಿಯರ್ ಪವನ್ ಅವರುಗಳು ಉಪಸ್ಥಿತರಿದ್ದರು.

ಸತತ ಆರು ದಿನಗಳ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಪೈಥಾನ್ ಬೇಸಿಕ್ಸ್ ಹಾಗೂ ಮಿನಿ ಪ್ರೊಜೆಕ್ಟ್‌ಗಳ ಬಗ್ಗೆ ತರಬೇತಿ ಪಡೆದುಕೊಂಡರು. ಡೇಟಾ ಸೈನ್ಸ್‌ನಲ್ಲಿ ಪೈಥಾನ್ ಭಾಷೆಯನ್ನು ಬಳಸುವುದನ್ನು ಕುರಿತಂತೆ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ತರಬೇತಿಯನ್ನು ಪಡೆದರು.

ಮಿನಿ ಪ್ರೊಜೆಕ್ಟ್‌ಗಳ ಪ್ರದರ್ಶನಕ್ಕೆ ಆಯೋಜಿಸಲು ವಿದ್ಯಾರ್ಥಿಗಳ ಗುಂಪುಗಳನ್ನು ಕಾಲೇಜಿನ ಇಂಡಸ್ಟ್ರಿ ಇನ್ಸ್ಟಿಟ್ಯೂಟ್ ಇಂಟರಾಕ್ಷನ್ ಸೆಲ್ ನಿರ್ದೇಶಕರಾದ ಡಾ.ಭಾರ್ಗವ ಎಚ್. ಕೆ. ಅವರು ರಚಿಸಿದರು. ಆರು ದಿನಗಳ ಕಾರ್ಯಾಗಾರದ ಫೀಡ್‌ಬ್ಯಾಕ್ ಅನ್ನು ವಿದ್ಯಾರ್ಥಿಗಳಿಂದ ಪಡೆದುಕೊಂಡರು.

ಕಾರ್ಯಾಗಾರಕ್ಕೆ ಭೇಟಿ ನೀಡಿದ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಯ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ. ಆರ್.ಹುಲಿನಾಯ್ಕರ್ ಅವರು ಮಾತನಾಡಿ “ವಿದ್ಯಾರ್ಥಿಗಳ ಕೌಶಲವನ್ನು ಅಭಿವೃದ್ಧಿಗೊಳಿಸುವುದು ಹಾಗೂ ಕಲಿಕಾ ಗುಣಮಟ್ಟವನ್ನು ಇನ್ನೂ ಹೆಚ್ಚಿಸುವುದು ನಮ್ಮ ಸಂಸ್ಥೆಯ ಗುರಿಯಾಗಿದೆ. ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯ ಸ್ವರೂಪವನ್ನು ತ್ವರಿತವಾಗಿ ಪಡೆಯುವ ನಿಟ್ಟಿನಲ್ಲಿ ಸಾಗುತ್ತಿದೆ. ಅದು ನಮ್ಮೆಲ್ಲರ ಕನಸು. ಅದಷ್ಟು ಆ ಕನಸು ಬೇಗ ಸಾಕಾರಗೊಳ್ಳುತ್ತದೆ” ಎಂದು ಹರ್ಷ ವ್ಯಕ್ತಪಡಿಸಿದರು.

ಆಡಳಿತ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಮಾತನಾಡಿ “ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇನ್ನು ಹೆಚ್ಚು ಕಾರ್ಯಾಗಾರಗಳನ್ನು ಆಯೋಜಿಸಲಾಗುವುದು. ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ನಮ್ಮ ಸಂಸ್ಥೆಯ ವತಿಯಿಂದ ಸದಾ ಕ್ರಿಯಾಶೀಲ ರಚನಾತ್ಮಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು”. ಎಂದರು.

■ **ವರದಿ: ಡಾ. ಭಾರ್ಗವ ಎಚ್. ಕೆ.**

# ಅಂತಾರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ




ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮ ದಿನದಂದು ಪ್ರತಿ ವರ್ಷ ಮೇ 12ರಂದು ಅಂತಾರಾಷ್ಟ್ರೀಯ ದಾದಿಯರ ಅಥವಾ ಶುಶ್ರೂಷಕರ ದಿನವನ್ನು ಆಚರಿಸಲಾಗುತ್ತದೆ. ವಿಶ್ವದ ಆಧುನಿಕ ವೈದ್ಯಕೀಯ ಕ್ಷೇತ್ರದ ನರ್ಸಿಂಗ್ ವಿಭಾಗದ ಸಂಸ್ಥಾಪಕರಾಗಿದ್ದ ಫ್ಲಾರೆನ್ಸ್, ವಿಶ್ವದಾದ್ಯಂತ ನರ್ಸಿಂಗ್ ವೃತ್ತಿಯ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದವರು.

ಶುಶ್ರೂಷಕರು (ದಾದಿಯರು) ಆರೋಗ್ಯ ರಕ್ಷಣಾ ವ್ಯವಸ್ಥೆಯ ಬೆನ್ನೆಲುಬು. ಅವರು ಶಿಕ್ಷಣ, ಸಲಹೆ ಮತ್ತು ಸಂಶೋಧನೆಯಲ್ಲಿ ರೋಗಿಗಳು ಮತ್ತು ಅವರ ಕುಟುಂಬಕ್ಕೆ ಸೇವೆ ಸಲ್ಲಿಸಲು ಸದಾ ಸಮರ್ಪಿತರಾದವರು. ದಾದಿಯರ ಅಮೂಲ್ಯವಾದ ಪಾತ್ರ ಮತ್ತು ಮಾನವೀಯತೆಗೆ ಅವರ ಸೇವೆಯನ್ನು ಗುರುತಿಸಲು ಈ ದಿನವನ್ನು ಆಚರಿಸಲಾಗುತ್ತದೆ.

ಈ ವರ್ಷದ ಥೀಮ್ “ನಮ್ಮ ನರ್ಸ್, ನಮ್ಮ ಭವಿಷ್ಯ”. ಆರೈಕೆಯ ಶಕ್ತಿಯಾಗಿರುವ ದಾದಿಯರು, ತಮ್ಮ ಪರಿಣತಿ, ನಾವೀನ್ಯತೆ ಹಾಗೂ ನಾಯಕತ್ವದ ಮೂಲಕ ಗಣನೀಯವಾಗಿ ಆರ್ಥಿಕ ಮೌಲ್ಯವನ್ನು ಉತ್ಪಾದಿಸುತ್ತಾರೆ.

ಜಾಗತಿಕವಾಗಿ, 130ಕ್ಕೂ ಹೆಚ್ಚು ದೇಶಗಳು ಇಂಟರ್‌ನ್ಯಾಷನಲ್ ಕೌನ್ಸಿಲ್ ಆಫ್ ನರ್ಸಸ್‌ನ ಸದಸ್ಯರಾಗಿದ್ದಾರೆ. ಅದರಲ್ಲಿ 8.4 ಮಿಲಿಯನ್ ದಾದಿಯರು ಪ್ರತಿನಿಧಿಸುತ್ತಿದ್ದಾರೆ. 2024ರ ಅಂತರರಾಷ್ಟ್ರೀಯ ದಾದಿಯರ ದಿನವು ಶುಶ್ರೂಷೆ, ಶಿಕ್ಷಣ, ಆರೋಗ್ಯ, ಕಾರ್ಯಪಡೆ, ಉದ್ಯೋಗಗಳು, ನಾಯಕತ್ವ, ನರ್ಸಿಂಗ್ ಕ್ರಮಬದ್ಧತೆ, ವೃತ್ತಿಪರ ಅಭ್ಯಾಸ ಮತ್ತು ಸೇವಾ ವಿತರಣೆಯ ಕೆಳಗಿನ ಸುಧಾರಿತ ಅಭ್ಯಾಸವನ್ನು ಶಿಫಾರಸು ಮಾಡುತ್ತದೆ.

**ಪಾಲಿಸಿ**

1. ತಮ್ಮ ಕೌಶಲಗಳನ್ನು ಹೆಚ್ಚಿಸಿಕೊಳ್ಳಲು ದಾದಿಯರನ್ನು ಬೆಂಬಲಿಸಬೇಕು.
2. ಉದ್ಯೋಗದಾತರು ದಾದಿಯರ ಪಾತ್ರವನ್ನು ಖಚಿತಪಡಿಸಿಕೊಳ್ಳಲು ನಿಯಮಿತ ಕೆಲಸದ ಸ್ಥಳ ಮೌಲ್ಯಮಾಪನವನ್ನು ನಡೆಸಬೇಕು.
3. ವೈದ್ಯಕೀಯ ಮತ್ತು ಇತರ ವೃತ್ತಿಪರರಂತೆ ನುರಿತ ನರ್ಸ್‌ಗೆ ಸಂಭಾವನೆ ನೀಡಲಾಗುತ್ತಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.
4. ರೋಗಿಗಳ ಪ್ರಯೋಜನಗಳು ಮತ್ತು ಸುರಕ್ಷತೆಗೆ ದಾದಿಯರು ಕೆಲಸದ ಅಭ್ಯಾಸವನ್ನು ಪ್ರಕಟಿಸುವ ಅಗತ್ಯವಿದೆ.
5. ಪಾಲಿಸಿ ತಯಾರಕರು ನರ್ಸಿಂಗ್ ಮತ್ತು ಇತರ ವೃತ್ತಿಪರ ಆರೋಗ್ಯ ನಿರ್ವಾಹಕರನ್ನು ಗುರುತಿಸುವ ಅಗತ್ಯವಿದೆ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಡಿಸೆಂಬರ್ 2023ರಲ್ಲಿ ನೀಡಿರುವ ಮಾಹಿತಿಯಂತೆ ಭಾರತದಲ್ಲಿರುವ ಶುಶ್ರೂಷಕರ ಅನುಪಾತ 476 ಜನರಿಗೆ ಒಬ್ಬರು. ಆದರೆ ಅಭಿವೃದ್ಧಿಹೊಂದಿದ ದೇಶಗಳಲ್ಲಿ ಸಾಮಾನ್ಯವಾಗಿ ಪ್ರತಿ 13 ಜನರಿಗೆ ಒಬ್ಬರು ಶುಶ್ರೂಷಕರಿದ್ದಾರೆ. ಹೀಗಾಗಿ ಉತ್ತಮ ಗುಣಮಟ್ಟದ ಆರೋಗ್ಯ ಸೇವೆ ನೀಡಲು ತುರ್ತು ಚಿಕಿತ್ಸಾ ಘಟಕಗಳಲ್ಲಿ ಪ್ರತಿಯೊಬ್ಬ ರೋಗಿಗೆ ಒಬ್ಬರು ಶುಶ್ರೂಷಕರು, ಸಾಮಾನ್ಯ ಚಿಕಿತ್ಸಾ ಕೊಠಡಿಗಳಲ್ಲಿ ಪ್ರತಿ ನಾಲ್ಕು ರೋಗಿಗಳಿಗೆ ಒಬ್ಬ ಶುಶ್ರೂಷಕರ ಅವಶ್ಯಕತೆ ಇದೆ.

**ಭಾರತದಲ್ಲಿ ಲಭ್ಯವಿರುವ ಸುಧಾರಿತ ತರಬೇತಿ ಕೋರ್ಸ್‌ಗಳು**

ನ್ಯೂರೋ ನರ್ಸಿಂಗ್, ಸೈಕಿಯಾಟ್ರಿಕ್ ನರ್ಸಿಂಗ್ ಮತ್ತು ತುರ್ತು ಮತ್ತು ಕ್ರಿಟಿಕಲ್ ಕೇರ್ ನರ್ಸಿಂಗ್, ಸೋಂಕು ನಿಯಂತ್ರಣ ನರ್ಸಿಂಗ್, ಕೌನ್ಸೆಲಿಂಗ್ ಮತ್ತು ಕ್ಲಿನಿಕಲ್ ಸೈಕಾಲಜಿಯಲ್ಲಿ ಡಿಪ್ಲೊಮಾ. ಅನಸ್ತೇಶಿಯಾ ನರ್ಸಿಂಗ್ ಕೋರ್ಸ್, ನರ್ಸ್ ಪ್ರಾಕ್ಟೀಷನರ್ ಹಾಗೂ ಇತರೆ ಅಧ್ಯಯನ ವಿಷಯಗಳು.

ಶ್ರೀದೇವಿ ನರ್ಸಿಂಗ್ ಕಾಲೇಜ್, ಶ್ರೀರಮಣಮಹರ್ಷಿ ನರ್ಸಿಂಗ್ ಕಾಲೇಜು ಮತ್ತು ದುರ್ಗಾಂಬಾ ನರ್ಸಿಂಗ್ ಸ್ಕೂಲ್ ಸಹಯೋಗದಲ್ಲಿ 2024ರ ಮೇ 13ರಂದು ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ಆಯೋಜಿಸಲಾಗಿತ್ತು. ಈ ಸಂದರ್ಭ ರಕ್ತದಾನ ಶಿಬಿರವನ್ನು ನಡೆಸಲಾಯಿತು. ಹಲವಾರು ವಿದ್ಯಾರ್ಥಿಗಳು ರಕ್ತದಾನ ಮಾಡಿದ್ದು, ಅವರಿಗೆ ಪ್ರಮಾಣಪತ್ರವನ್ನು ವಿತರಿಸಲಾಯಿತು.

ಸಂಸ್ಥೆಗಳ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್, ವೈದ್ಯಕೀಯ ನಿರ್ದೇಶಕರಾದ ಡಾ. ರಮಣ ಎಂ ಹುಲಿನಾಯ್ಕರ್, ಹೆಚ್‌ಆರ್ ಮತ್ತು ಐಟಿ ನಿರ್ದೇಶಕ ಎಂ.ಎಸ್. ಪಾಟೀಲ್ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಸಿ.ಎ.ಒ. ಟಿ.ವಿ.ಬ್ರಹ್ಮದೇವಯ್ಯ, ನರ್ಸಿಂಗ್ ಸೂಪರಿಂಟೆಂಡೆಂಟ್ ಶ್ರೀಮತಿ ಶೀಲಾ, ನರ್ಸಿಂಗ್ ಡೆಪ್ಯೂಟಿ ಸೂಪರಿಂಟೆಂಡೆಂಟ್ ನರಸಪ್ಪ, ರಮಣ ಮಹರ್ಷಿ ಕಾಲೇಜ್ ಆಫ್ ನರ್ಸಿಂಗ್ ಪ್ರಾಂಶುಪಾಲರಾದ ಪ್ರೊ. ಶ್ರೀಮತಿ ಉಷಾ ಎಸ್, ದುರ್ಗಾಂಬಾ ಸ್ಕೂಲ್ ಆಫ್ ನರ್ಸಿಂಗ್ ಪ್ರಾಂಶುಪಾಲರಾದ ಪ್ರೊ. ಶ್ರೀಮತಿ ಅಂಬಾ, ಪ್ರೊ.ನಾರಾಯಣ್, ಪ್ರೊ. ಯಶೋದ, ಪ್ರೊ. ಮಾನಸ, ಪ್ರೊ.ನಾಗವೇಣಿ, ಪ್ರೊ.ರೇವಣ್ಣ ಮತ್ತು ಡಾ.ಟಿ.ಎಸ್.ಭೀಮರಾಜು ಹಾಗೂ 4ನೇ ವರ್ಷದ ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

■ **ವರದಿ: ಎನ್. ಆನಂದ**



ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ. ಎಲ್.ಹರೇಂದ್ರಕುಮಾರ್, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ. ಮೋಹನ್‌ಕುಮಾರ್, ರೋಗ ನಿರ್ಣಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ವಿ.ಎ.ಗಿರೀಶ್, ಡಾ.ಎಂ.ಸಿ.ಕೃಷ್ಣ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಡಾ.ಸುರೇಶ್ ಹನಗವಾಡಿ, ಡಾ.ಎ.ಎಸ್. ರಾಮಸ್ವಾಮಿ, ಡಾ. ಹೆಫ್ಜಿಬಾರಾಣಿ, ಡಾ.ಆರ್.ವೀಣಾ, ಡಾ.ಪಿ.ಜೆ. ಗೀತಾ, ಡಾ.ಎಂ.ವಿ.ರಶ್ಮಿ ಮತ್ತು ಡಾ.ಜಿ.ಕೆ.ಪಾರ್ವತಿ ದೇವಿ.

# ‘ಪೆಥಾಲಜಿ 2024ರಲ್ಲಿ ನವೀಕರಣಗಳು’ ಕುರಿತು ನಿರಂತರ ವೈದ್ಯಕೀಯ ಶಿಕ್ಷಣ

ಇಂದಿನ ದಿನಗಳಲ್ಲಿ ಜ್ಞಾನ, ತಂತ್ರಜ್ಞಾನ ಮತ್ತು ನಮ್ಮ ಸಮಾಜದಲ್ಲಿ ಅವರು ಹೊಂದಿರುವ ಪರಿಣಾಮಗಳ ವಿನಿಮಯವನ್ನು ನಾವು ಉಳಿಸಿಕೊಳ್ಳುವುದು ಮತ್ತು ಸಶಕ್ತಗೊಳಿಸುವುದು ಅತ್ಯಗತ್ಯ.

ಅಷ್ಟೇ ಅಲ್ಲ, ವೈದ್ಯಕೀಯ ವಿಜ್ಞಾನವು ಬೆಳೆಯಲು ಮತ್ತು ಪ್ರವರ್ಧಮಾನಕ್ಕೆ ಬರಲು ಅಗಾಧವಾದ ಸಾಮರ್ಥ್ಯವನ್ನು ಹೊಂದಿದೆ. ಇದು ಲಕ್ಷಾಂತರ ಜನರ ಜೀವನವನ್ನು ತಲುಪುತ್ತದೆ ಹಾಗೂ ಹೊಸ ಆರೋಗ್ಯ ಮಾದರಿಯನ್ನು ನಿರ್ಮಿಸುತ್ತದೆ.

ವೈದ್ಯಕೀಯ ಕ್ಷೇತ್ರದಲ್ಲಿನ ಪ್ರಗತಿಯು ಯಾವಾಗಲೂ ಮಾನವನ ನಿರ್ಣಯ, ಸೃಜನಶೀಲತೆ ಮತ್ತು ಜೀವನವನ್ನು ಗುಣಪಡಿಸುವ ಮತ್ತು ಸುಧಾರಿಸುವ ಅಂತರ್ಗತ ಬಯಕೆಗೆ ಸಾಕ್ಷಿಯಾಗಿದೆ.

ವೃತ್ತಿಪರರ ನಡುವಿನ ಅಂತರವನ್ನು ಕಡಿಮೆ ಮಾಡುವುದು, ಹೊಸ ಆವಿಷ್ಕಾರಗಳ ತಿಳುವಳಿಕೆಯನ್ನು ಬೆಳೆಸುವುದು ಮತ್ತು ಆರೋಗ್ಯ ರಕ್ಷಣೆಯ ಭವಿಷ್ಯವನ್ನು ರೂಪಿಸುವ ನಾವೀನ್ಯತೆಗಳ ಮೇಲೆ ಬೆಳಕು ಚೆಲ್ಲುವುದು ನಮ್ಮ ಗುರಿಯಾಗಿದೆ.

ಪೆಥಾಲಜಿಯು (ರೋಗನಿರ್ಣಯಶಾಸ್ತ್ರ) ವ್ಯಾಪಕವಾದ ವೈದ್ಯಕೀಯ ಸಂಶೋಧನಾ ಕ್ಷೇತ್ರಗಳು ಮತ್ತು ಅಭ್ಯಾಸಗಳನ್ನು ಒಳಗೊಂಡಿರುವ ರೋಗಗಳ ಅಧ್ಯಯನವಾಗಿದೆ. ಅಂಗಾಂಶ ಮತ್ತು ಮಾನವ ಜೀವಕೋಶದ ಮಾದರಿಯ ವಿಶ್ಲೇಷಣೆಯ ಮೂಲಕ ಹೆಚ್ಚಾಗಿ ರೋಗಗಳನ್ನು ಪತ್ತೆ ಹಚ್ಚುವ ಹಲವಾರು ವಿಭಿನ್ನ, ಆದರೆ ಪರಸ್ಪರ ಸಂಬಂಧ ಹೊಂದಿರುವ ವೈದ್ಯಕೀಯ ವಿಶೇಷತೆಗಳನ್ನು ಇದು ಒಳಗೊಂಡಿದೆ.

ಸಾಮಾನ್ಯ ವಿಚಾರಣೆ ಮತ್ತು ಸಂಶೋಧನೆಯ ಕ್ಷೇತ್ರವಾಗಿ, ರೋಗಶಾಸ್ತ್ರವು ರೋಗದ ಅಂಶಗಳನ್ನು ತಿಳಿಸುತ್ತದೆ; ಕಾರಣ, ಅಭಿವೃದ್ಧಿಯ ಕಾರ್ಯವಿಧಾನ, ಜೀವಕೋಶಗಳ ರಚನಾತ್ಮಕ ಬದಲಾವಣೆಗಳು ಮತ್ತು ಬದಲಾವಣೆಗಳ ಪರಿಣಾಮಗಳು (ವೈದ್ಯಕೀಯ ಅಭಿವ್ಯಕ್ತಿಗಳು) ಅಂಗಾಂಶಗಳನ್ನು ವಿಶ್ಲೇಷಿಸಲು ಸೂಕ್ಷ್ಮದರ್ಶಕದ ಮತ್ತಷ್ಟು ಬೆಳವಣಿಗೆಗಳಿಂದ ಆಧುನಿಕ ರೋಗಶಾಸ್ತ್ರವು ವಿಶೇಷವಾಗಿ ಮುಂದುವರಿದಿದೆ. ಇದಕ್ಕೆ ರುಡಾಲ್ಫ್ ವಿರ್ಚೋ ಗಮನಾರ್ಹ ಕೊಡುಗೆ ನೀಡಿದರು.

ನಿರಂತರ ವೈದ್ಯಕೀಯ ಶಿಕ್ಷಣವು (ಸಿಎಂಇ) ನಿರಂತರ ಶಿಕ್ಷಣವಾಗಿದ್ದು, ವೈದ್ಯಕೀಯ ಕ್ಷೇತ್ರದಲ್ಲಿ ಇರುವವರು ತಮ್ಮ ಸಾಮರ್ಥ್ಯಗಳನ್ನು ಕಾಪಾಡಿಕೊಳ್ಳಲು, ಹೊಸದನ್ನು ಮತ್ತು ಅಭಿವೃದ್ಧಿಶೀಲ ಕ್ಷೇತ್ರಗಳ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ.

2024 ಮೇ 11ರಂದು ರೋಗನಿರ್ಣಯಶಾಸ್ತ್ರ ವಿಭಾಗವು “ರೋಗನಿರ್ಣಯಶಾಸ್ತ್ರದ ನವೀಕರಣಗಳು – 2024” ಕುರಿತು ನಿರಂತರ ವೈದ್ಯಕೀಯ ಶಿಕ್ಷಣ (ಸಿ.ಎಂ.ಇ.) ಕಾರ್ಯಕ್ರಮ ಆಯೋಜಿಸಿತ್ತು. ಮುಖ್ಯಸ್ಥರಾದ ಹಾಗೂ ಪ್ರೊಫೆಸರ್ ಡಾ. ಗಿರೀಶ್ ವಿ ಎ ಅವರು ಸಂಘಟನಾ ಅಧ್ಯಕ್ಷರಾಗಿದ್ದರು. ಪ್ರಾಧ್ಯಾಪಕರಾದ ಡಾ. ಕೃಷ್ಣ ಎಂ. ಸಿ. ಸಂಘಟನಾ ಕಾರ್ಯದರ್ಶಿಯಾಗಿದ್ದರು. ಈ ಸಂದರ್ಭ ದಾವಣಗೆರೆಯ ಜೆಜೆಎಂಎಂಸಿಯ ಪ್ರಾಧ್ಯಾಪಕರಾದ ಡಾ. ಸುರೇಶ ಹನಗವಾಡಿ ಅವರು “ರಕ್ತಸ್ರಾವ ಅಸ್ವಸ್ಥತೆಗಳ ರೋಗ ನಿರ್ಣಯದಲ್ಲಿ ಪ್ರಯೋಗಾಲಯ ವಿಧಾನ” ಕುರಿತು ಉಪನ್ಯಾಸ ನೀಡಿದರು. ವಿವಿಧ ರೀತಿಯ ಹೆಪ್ಪುಗಟ್ಟುವಿಕೆ ಅಧ್ಯಯನಗಳು ಮತ್ತು ಅಂಶ ವಿಶ್ಲೇಷಣೆಗಳ ತಾಂತ್ರಿಕ ಅಂಶಗಳ ಕುರಿತು ಅವರು ಮಾಹಿತಿ ನೀಡಿದರು. ಅಲ್ಲದೆ, ರಕ್ತಸ್ರಾವದ ತೊಂದರೆಗಳ ಕೆಲವು ಸನ್ನಿವೇಶಗಳ ಬಗ್ಗೆಯೂ ಚರ್ಚಿಸಲಾಯಿತು. ಕಾರ್ಯಕ್ರಮವು ಸಾಕಷ್ಟು ತಿಳಿವಳಿಕೆ ಮೂಡಿಸಿದ್ದು ಮಾತ್ರವಲ್ಲ, ಸಂವಾದಾತ್ಮಕವಾಗಿತ್ತು.

“ಅಪ್ರೋಚ್ ಟು ಮೆಲಿಗ್ನೆನ್ಸಿ ಆಫ್ ಅನ್‌ನೋನ್ ಒರಿಜಿನ್ (MOU) ಹಾಗೂ “ಅಪ್ರೋಚ್ ಟು ಲಿಂಫೋ ಮಾಸ್” ಕುರಿತು ಮಾತನಾಡಿದ ಬೆಂಗಳೂರಿನ ಹೆಚ್‌ಸಿಜಿ ಆಸ್ಪತ್ರೆಯ ಆಂಕೊಪೆಥಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ವೀಣಾ ಆರ್ ಅವರು, ಗೆಡ್ಡೆಗಳ ರೋಗನಿರ್ಣಯ, ಟೈಪಿಂಗ್ ಮತ್ತು ಶ್ರೇಣೀಕರಣಕ್ಕೆ ಹಿಸ್ಟೋಪಾಥಾಲಜಿ ಮತ್ತು ಇಮ್ಯುನೊಹಿಸ್ಟೋಕೆಮಿಸ್ಟ್ರಿ ಹೇಗೆ ಉಪಯುಕ್ತವಾಗಿವೆ ಎಂಬುದನ್ನು ವಿವರಿಸಿದರು.

“ಚಿಕಿತ್ಸಕ ರೋಗನಿರ್ಣಯಶಾಸ್ತ್ರ” ಎಂಬ ಹೊಸ ಪರಿಕಲ್ಪನೆಯನ್ನು ಪರಿಚಯಿಸಿದ ಅವರು, ಹೆಚ್.ಸಿ.ಜಿ. ಆಸ್ಪತ್ರೆಯಲ್ಲಿ ಎದುರಿಸಿದ ಕೆಲವು ಸವಾಲಿನ ಪ್ರಕರಣಗಳನ್ನು ಪರಿಹರಿಸಿದ ವಿಷಯಗಳ ಕುರಿತು ಎಳೆ ಎಳೆಯಾಗಿ ತರೆದಿಟ್ಟರು.

▶▶ 6ನೇ ಪುಟಕ್ಕೆ...



ಪೆಥಾಲಜಿಯಲ್ಲಿ ಹೆಚ್ಚು ಅಂಕ ಗಳಿಸಿ ಮೊದಲ ಮೂರು ಸ್ಥಾನಗಳಿಸಿರುವ ಸಾಗರ್ ಶಿರೂರ್, ಪೂಜಾ ಗುಮ್ಮಡಿ ಹಾಗೂ ವಿಶಾಲ್ ಜಿ ಅವರಿಗೆ ಪ್ರಮಾಣ ಪತ್ರ ನೀಡಲಾಯಿತು.

## ಗುಣಾತ್ಮಕ ಸೇವೆಯನ್ನು ಒದಗಿಸುವಲ್ಲಿ ಪ್ರಯೋಗಶಾಲೆಗಳ ಪಾತ್ರ

“ಆಧುನಿಕ ವೈದ್ಯಕೀಯಕ್ಷೇತ್ರ ಬಹು ವಿಸ್ತಾರವಾಗಿದೆ. ರೋಗದ ನಿಖರತೆ, ರೋಗ ದೃಢಪಡಿಸುವ ಬಗ್ಗೆ ರೋಗನಿರ್ಣಯ ಶಾಸ್ತ್ರವು ಮುಖ್ಯ ಪಾತ್ರವನ್ನು ವಹಿಸುತ್ತದೆ. ಡಿಜಿಟಲ್ ರೋಗನಿರ್ಣಯ ಶಾಸ್ತ್ರದ ಮುಖಾಂತರ ಆಧುನಿಕ ವಿಜ್ಞಾನ ವಿಸ್ತಾರಗೊಳ್ಳುತ್ತಿದೆ. ವೈದ್ಯಕೀಯ ಕ್ಷೇತ್ರದಲ್ಲಿ ವಿವಿಧ ರೀತಿಯ ತಂತ್ರಜ್ಞಾನವು ಅಳವಡಿಸಿಕೊಂಡು, ರೋಗಿಗಳಿಗೆ ಉತ್ತಮ ಹಾಗೂ ಗುಣಾತ್ಮಕಸೇವೆ ನೀಡುವಲ್ಲಿ ಪ್ರಯೋಗಶಾಲೆಗಳ ಪಾತ್ರ ಬಹಳ ದೊಡ್ಡದಾಗಿದೆ. ರೋಗಿಗಳಿಗೆ ಅತ್ಯುತ್ತಮ ಚಿಕಿತ್ಸೆ ನೀಡಲು ಹೆಚ್ಚು ಶ್ರಮ ವಹಿಸಲಾಗುತ್ತಿದೆ ಇಂತಹ ಕಾರ್ಯಾಗಾರಗಳು ಅನುಭವಿ ವೈದ್ಯರು ತಮ್ಮ ಪ್ರಾಯೋಗಿಕಜ್ಞಾನವನ್ನು ಪ್ರತಿ ವಿದ್ಯಾರ್ಥಿಗೂ ಹಂಚುತ್ತಾರೆ. ಈ ಸಂಪನ್ಮೂಲವ್ಯಕ್ತಿಗಳು ನೀಡುವ ಜ್ಞಾನವನ್ನು ವೈದ್ಯಕೀಯ ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು. ಅಮೆರಿಕಾದಂತಹ ದೇಶದಲ್ಲಿ ಪೆಥಾಲಜಿಗೆ ಮುಖ್ಯವಾದ ಆದ್ಯತೆಯಿದೆ. ಅದು ಭಾರತದಲ್ಲೂ ಮುಂದಿನ ದಿನಗಳಲ್ಲಿ ಆ ಪರಿಸ್ಥಿತಿ ಬರಬಹುದು” ಎಂದು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್‌ರವರು ತಿಳಿಸಿದರು.

ನಗರದ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಮೇ.11 ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಶ್ರೀದೇವಿ ಆಸ್ಪತ್ರೆಯ ಸಭಾಂಗಣದಲ್ಲಿ “ರೋಗ ನಿರ್ಣಯಶಾಸ್ತ್ರದ ವಿಭಾಗದಿಂದ Updates in Pathology CME-2024 (ನಿರಂತರ ವೈದ್ಯಕೀಯ ಶಿಕ್ಷಣ (ಸಿ.ಎಂ.ಇ)) ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಡಾ.ಹುಲಿನಾಯ್ಕರ್ ಅವರು “ಇದು ಹೈಬ್ರಿಡ್ ಮೂಲಕ ಪ್ರಚುರ ಪಡಿಸಲಾಗಿತ್ತು. ಕರ್ನಾಟಕದಿಂದ 219 ಪ್ರತಿನಿಧಿಗಳು ಹಾಗೂ ಆನ್‌ಲೈನ್ ಮೂಲಕ 87 ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಇದರ ಜೊತೆಗೆ ಪದವಿ ಮತ್ತು ಸ್ನಾತಕೋತ್ತರ ಪದವಿ ವೈದ್ಯ ವಿದ್ಯಾರ್ಥಿಗಳು ನಿರಂತರ ವೈದ್ಯಕೀಯ ಶಿಕ್ಷಣ (ಸಿ.ಎಂ.ಇ) ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು” ಎನ್ನುವ ಮಾಹಿತಿಯನ್ನು ನೀಡಿದ್ದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ. ಎಲ್.ಹರೇಂದ್ರಕುಮಾರ್‌ರವರು ಮಾತನಾಡುತ್ತಾ “ಇಂತಹ ವೈದ್ಯಕೀಯ ಕಾರ್ಯಾಗಾರಗಳು ಆಯೋಜಿಸುವುದು ಒಂದು ಉತ್ತಮ ಬೆಳವಣಿಗೆ. ನಿರಂತರ ಕಲಿಕೆ ವೈದ್ಯಕೀಯಕ್ಷೇತ್ರದಲ್ಲಿ ಹೊಸ ಅವಿಷ್ಕಾರಗಳನ್ನು ತಿಳಿಯುವಲ್ಲಿ ಸಹಾಯ ಮಾಡುತ್ತದೆ. ಹೀಗೆ ಮಾಡಿದರೆ ವೈದ್ಯಕೀಯ ವಿದ್ಯಾರ್ಥಿಗಳ ಜ್ಞಾನ ವೃದ್ಧಿಯಾಗುತ್ತದೆ. ಮುಂದೆ ಅವರು ರೋಗಿಗಳ ಚಿಕಿತ್ಸೆ ನೀಡಲು ಇಂತಹ ಕಾರ್ಯಾಗಾರಗಳು ಅನುಕೂಲಕರವಾಗುತ್ತದೆ” ಎಂದರು.

ಈ ಕಾರ್ಯಾಗಾರದಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್‌ರವರು ದ್ವಿತೀಯ ವರ್ಷದ ಎಂ.ಬಿ.ಬಿ.ಎಸ್. ವೈದ್ಯ ವಿದ್ಯಾರ್ಥಿಗಳಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಕಾರ್ಯಾಗಾರದಲ್ಲಿ ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಮೋಹನ್‌ಕುಮಾರ್, ರೋಗ ನಿರ್ಣಾಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ವಿ.ಎ. ಗಿರೀಶ್, ಡಾ.ಎಂ.ಸಿ.ಕೃಷ್ಣ, ಸಂಪನ್ಮೂಲ ವ್ಯಕ್ತಿಗಳಾಗಿ ಡಾ.ಸುರೇಶ್ ಹನಗವಾಡಿ, ಡಾ.ಎ.ಎಸ್.ರಾಮಸ್ವಾಮಿ, ಡಾ. ಹೆಫ್ಜಿಬಾರಾಣಿ, ಡಾ.ಆರ್.ವೀಣಾ, ಡಾ.ಪಿ.ಜೆ.ಗೀತಾ ಮತ್ತು ಡಾ.ಎಂ.ವಿ.ರಶ್ಮಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಡಾ.ಜಿ.ಕೆ.ಪಾರ್ವತಿದೇವಿ ಅವರನ್ನು ಸನ್ಮಾನಿಸಲಾಗಿತ್ತು.

ಪ್ರಾರಂಭದಲ್ಲಿ ರೋಗ ನಿರ್ಣಾಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ವಿ.ಎ.ಗಿರೀಶ್‌ರವರು ಸ್ವಾಗತ ಕೋರಿದರು. ಡಾ.ಎಂ.ಸಿ.ಕೃಷ್ಣರವರು ವಂದನಾರ್ಪಣೆ ಮಾಡಿದರು.

■ ವರದಿ: ಎನ್.ಆನಂದ

# ಟಿ.ಎನ್.ಎಸ್.ಫೌಂಡೇಶನ್ ಮತ್ತು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ನಡುವೆ ಒಡಂಬಡಿಕೆ



ನಗರದ ಪ್ರತಿಷ್ಠಿತ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸಾಯಿನ್ಸ್ ವಿಭಾಗದಿಂದ ಮೇ.14ರಂದು ಮೂರನೇ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಟಿ. ಎನ್.ಎಸ್ ಫೌಂಡೇಶನ್ ವತಿಯಿಂದ ಅಂತಾರಾಷ್ಟ್ರೀಯ ಎಕ್ಸಂಚರ್ ಕಂಪನಿಯ ಸಿ.ಎಸ್.ಆರ್ ಯೋಜನೆಯ ಟ್ರೇನಿಂಗ್ ಹಾಗೂ ಪ್ಲೇಸ್‌ಮೆಂಟ್‌ಗಳ ಆರಂಭಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಪ್ರಾಂಶುಪಾಲ ರಾದ ಡಾ.ನರೇಂದ್ರ ವಿಶ್ವನಾಥ ಅವರು "ಟಿ. ಎನ್.ಎಸ್ ಫೌಂಡೇಶನ್‌ನವರು ಅನೇಕ ಬಹುರಾಷ್ಟ್ರೀಯ ಸಾಫ್ಟ್‌ವೇರ್ ಕಂಪನಿಗಳ ಸಿ.ಎಸ್. ಆರ್ ನಿಧಿ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುತ್ತಿದ್ದಾರೆ. ದೇಶದ ಬಹುತೇಕ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಫ್ಟ್‌ವೇರ್ ಕಂಪನಿಗಳನ್ನು ಸೇರಲು ಅವರು ವಿದ್ಯಾರ್ಥಿಗಳಿಗೆ ಸಹಾಯಕರಾಗಿದ್ದಾರೆ. ನಮ್ಮ ಕಾಲೇಜಿನಲ್ಲಿ ಎಕ್ಸಂಚರ್ ಕಂಪನಿಯ ಸಿ.ಎಸ್.ಆರ್ ನಿಧಿಯ ಅಡಿಯಲ್ಲಿ 45 ದಿನಗಳ ಕಾಲ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿದ್ದಾರೆ. ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಅದನ್ನು ಸದುಪಯೋಗಪಡಿಸಿಕೊಳ್ಳಬೇಕು" ಎನ್ನುವ ಸಲಹೆಯನ್ನು ವಿದ್ಯಾರ್ಥಿಗಳಿಗೆ ನೀಡಿದರು.

ಟಿ.ಎನ್.ಎಸ್.ಫೌಂಡೇಶನ್ ತಂಡದವರು ಶ್ರೀದೇವಿ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ.ಎಂ ಆರ್ ಹುಲಿನಾಯ್ಕರ ಅವರನ್ನು ಭೇಟಿಯಾದರು. ಅವರು ಶೈಕ್ಷಣಿಕ ತಿಳುವಳಿಕೆ ಒಡಂಬಡಿಕೆಗೆ ಸಹಿ ಮಾಡಿದರು.

ಈ ಸಂದರ್ಭದಲ್ಲಿ ಡಾ.ಎಂ.ಆರ್. ಹುಲಿನಾಯ್ಕರ್ ಅವರು ಮಾತನಾಡುತ್ತಾ "ನಮ್ಮ ಸಂಸ್ಥೆಯ ವಿದ್ಯಾರ್ಥಿಗಳಿಗೆ ಸಾಫ್ಟ್‌ವೇರ್ ಕಂಪನಿಗಳ ಆಪೇಕ್ಷಿತ ಶೈಕ್ಷಣಿಕ ಕೌಶಲವನ್ನು ಇನ್ನೂ ಹೆಚ್ಚಿಸುವ ಕಾರ್ಯಕ್ರಮಗಳನ್ನು ಸದಾಕಾಲ ಹಮ್ಮಿಕೊಳ್ಳಲಾಗುವುದು" ಎಂದರು.

ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ ಎಸ್ ಪಾಟೀಲ್ ಅವರು "ಶ್ರೀದೇವಿ ಇಂಜನೀಯರಿಂಗ್ ಕಾಲೇಜಿನಲ್ಲಿ ಇನ್ನು ಹೆಚ್ಚು ಉಪಯುಕ್ತವಾದ ಟ್ರೇನಿಂಗ್ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು" ಎಂದರು.

ಶ್ರೀದೇವಿ ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ. ರಮಣ ಹುಲಿನಾಯ್ಕರ, ಸಿ.ಇ.ಓ ಪ್ರದೀಪ, ಟಿ.ಎನ್ ಫೌಂಡೇಶನ್‌ನ ಕೆ.ಮಧು ಮಾಲಿನಿ ಮತ್ತು ಎಂ.ಎಸ್. ಶ್ರೀಕಾಂತ ಅವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಕಂಪ್ಯೂಟರ್ ಸೈನ್ಸ್ ಮುಖ್ಯಸ್ಥರಾದ ಡಾ.ಬಸವೇಶ ಡಿ, ಐಐಐಸಿ ನಿರ್ದೇಶಕ ಡಾ.ಭಾರ್ಗವ ಎಚ್.ಕೆ. ಉಪಸ್ಥಿತರಿದ್ದರು.

■ ವರದಿ: ಡಾ. ಭಾರ್ಗವ ಎಚ್. ಕೆ.

## ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಟೆಸ್ಟ್ - 2024

# ಸಮಾಜದ ಎಲ್ಲಾ ಮಕ್ಕಳಿಗೂ ಇಂಜಿನಿಯರಿಂಗ್ ಶಿಕ್ಷಣದ ಅವಕಾಶವಿರಲಿ

"ಪ್ರಸ್ತುತ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ವೈದ್ಯಕೀಯ, ಇಂಜಿನಿಯರಿಂಗ್ ಮತ್ತು ಇತರೆ ವೃತ್ತಿಪರ ಶಿಕ್ಷಣವು ಸಮಾಜದ ಎಲ್ಲಾ ವರ್ಗದ ಮಕ್ಕಳಿಗಳಿಗೂ ತಲುಪಬೇಕು. ಅಲ್ಲೂ ಪ್ರತಿಭಾವಂತರಿದ್ದಾರೆ. ಆರ್ಥಿಕ ಚೈತನ್ಯವಿಲ್ಲದ ಮಕ್ಕಳು ಉತ್ತಮ ವೃತ್ತಿಶಿಕ್ಷಣದಿಂದ ಸಬಲರಾಗಬೇಕು. ಕಳೆದ ಹತ್ತು ವರ್ಷಗಳಿಂದಲೂ ಶ್ರೀದೇವಿ ವಿದ್ಯಾಸಂಸ್ಥೆ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಸ್ಕಾಲರ್‌ಶಿಪ್ ಟೆಸ್ಟ್ ನಡೆಸುತ್ತಿದೆ. ಈ ತನಕ ಹಲವಾರು ವಿದ್ಯಾರ್ಥಿಗಳು ಎಲ್ಲಾ ವಿಭಾಗದಲ್ಲೂ ಉಚಿತವಾಗಿ ಸೀಟ್‌ನ್ನು ಪಡೆದುಕೊಂಡಿದ್ದಾರೆ" ಎಂದು ಶ್ರೀದೇವಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯವು ಮೇ19 ರಂದು ಪಿ.ಯು.ಸಿ. ಉತ್ತೀರ್ಣರಾಗಿ ಬಿ.ಇ. ಪ್ರವೇಶ ಪಡೆಯಲು ಬಯಸುತ್ತಿರುವ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪ್ರವೇಶಪರೀಕ್ಷೆಯ ಪ್ರಕ್ರಿಯೆಯನ್ನು ಉದ್ಘಾಟಿಸಿ ಮಾತನಾಡಿದ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ್ ಅವರು ಅಭಿಪ್ರಾಯಪಟ್ಟರು.

ಪರೀಕ್ಷೆಯಲ್ಲಿ ಪ್ರಥಮ 20 ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ರ‍್ಯಾಂಕ್ ಪ್ರಮಾಣ ಪತ್ರಗಳನ್ನು ನೀಡಿ ಗೌರವಿಸಲಾಯಿತು. ವಿದ್ಯಾರ್ಥಿಗಳಿಗೆ 4,00,000 ರೂಗಳಿಂದ 1,00,000 ರೂಗಳ ಸ್ಕಾಲರ್‌ಶಿಫ್ ಸೌಲಭ್ಯ ಪ್ರಕಟಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್, ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿಯಾದ ಅಂಬಿಕಾ ಎಂ ಹುಲಿನಾಯ್ಕರ್ ಮತ್ತು ಡಾ.ಲಾವಣ್ಯ ರಮಣ ಅವರು ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.




ವಿದ್ಯಾರ್ಥಿ ವೇತನ ಪರೀಕ್ಷೆ–2024ಯಲ್ಲಿ ಹೆಚ್ಚು ಅಂಕ ಪಡೆಯುವುದರ ಮೂಲಕ ಸ್ಕಾಲರ್ ಶಿಪ್ ಪಡೆದ ವಿದ್ಯಾರ್ಥಿಗಳು.

# 'ಪೆಥಾಲಜಿ 2024ರಲ್ಲಿ ನವೀಕರಣಗಳು' ಕುರಿತು ನಿರಂತರ ವೈದ್ಯಕೀಯ ಶಿಕ್ಷಣ

◀◀ ...ಐದನೇ ಪುಟದಿಂದ

ಕುಪ್ಪಂನ ಪಿಇಎಸ್‌ಎಂಎಸ್‌ಆರ್‌ನ ಮುಖ್ಯಸ್ಥರಾದ ಡಾ.ರಾಮಸ್ವಾಮಿ ಅವರು "ಪ್ಲಾಸ್ಮಾಸೈಟಾಯ್ಡ್ ಪರ್ಝಲ್ಸ್" ಹಾಗೂ "ಅನಾಟೊಮಿಕಲ್ ಅನೆಕ್‌ಟಡ್ಸ್" ಕುರಿತು ಮಾತನಾಡಿ, ವಿವಿಧ ರೀತಿಯ ನಾನ್–ನಿಯೋಪ್ಲಾಸ್ಟಿಕ್ ಮತ್ತು ನಿಯೋಪ್ಲಾಸ್ಟಿಕ್ ಪ್ಲಾಸ್ಮಾ ಕೋಶಗಳು ಮತ್ತು ಮಿಮಿಕರ್‌ಗಳನ್ನು ಹೇಗೆ ಪ್ರತ್ಯೇಕಿಸುವುದು ಎಂಬುದನ್ನು ವಿವರಿಸಿದರು. ಇದೇ ಸಂದರ್ಭ ವಿವಿಧ ಸ್ವಾರಸ್ಯಕರ ಪ್ರಕರಣಗಳ ಬಗ್ಗೆ ಚರ್ಚೆ ನಡೆಸಲಾಯಿತು.

ಧಾರವಾಡದ ಎಸ್‌ಡಿಎಂ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕರಾದ ಡಾ.ಹೆಪ್ಜಿಬಾ ರಾಣಿ ಅವರು ಕೆಲವು ಸೋಂಕಿನ ಪ್ರಕರಣಗಳನ್ನು ಪ್ರಸ್ತುತಪಡಿಸಿದರು. ರೋಗನಿರ್ಣಯಕ್ಕೆ ಅತ್ಯಂತ ಜಾಗರೂಕತೆಯ ಕ್ರಮಗಳ ಅಗತ್ಯದ ಬಗ್ಗೆ ವಿವರಣೆ ನೀಡಿದರು.

ಈ ಸಂದರ್ಭ ಮಾತನಾಡಿದ ಸಂಸ್ಥೆಗಳ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್, ಸಂಶೋಧನೆ, ತಂತ್ರಜ್ಞಾನ ಹಾಗೂ ಪರಿಣತಿಗೆ ಸಂಬಂಧಿಸಿದಂತೆ ವಿಷಯದ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ತಿಳಿದುಕೊಳ್ಳಲು ಇಂತಹ ಸಿ.ಎಂ.ಇ. ನಡೆಸುವ ಪ್ರಾಮುಖ್ಯತೆಗಳ ಕುರಿತು ಒತ್ತಿ ಹೇಳಿದರು.

ಎಲ್ಲಾ ಪ್ರತಿನಿಧಿಗಳು ಮತ್ತು ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಇಂತಹ ಕಾರ್ಯಕ್ರಮಗಳನ್ನು ಬಳಸಿಕೊಳ್ಳುವಂತೆ ಕೋರಿದರು.




ರಸಪ್ರಶ್ನೆ ವಿಭಾಗದಲ್ಲಿ ಮೊದಲ ಬಹುಮಾನ ಪಡೆದ ಕೀರ್ತಿ ಜಿ. ಮತ್ತು ಮೋನಿಕಾ ಆರ್ ಅವರಿಗೆ ಪ್ರಮಾಣ ಪತ್ರ.



ರಸಪ್ರಶ್ನೆ ವಿಭಾಗದಲ್ಲಿ ದ್ವಿತೀಯ ಬಹುಮಾನ ಪಡೆದ ಸಂಗಮೇಶ್ ಎಸ್ ಮತ್ತು ಬದ್ರಿ ಸಿ.ಎಂ. ಅವರಿಗೆ ಪ್ರಮಾಣ ಪತ್ರ.

ರೋಗನಿರ್ಣಯಶಾಸ್ತ್ರ, ಮೈಕ್ರೋಬಯಾಲಜಿ ಮತ್ತು ಬಯೋಕೆಮಿಸ್ಟ್ರಿ ಸೇರಿದಂತೆ ರೋಗನಿರ್ಣಯ ವಿಭಾಗಗಳು ರೋಗಿಗಳ ರೋಗನಿರ್ಣಯ ಮತ್ತು ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇದು ಗುಣಮಟ್ಟದ ಆರೋಗ್ಯ ಸೇವೆಗೆ ಸಹಾಯ ಮಾಡುತ್ತದೆ ಎಂದರು.

ಪ್ರಾಂಶುಪಾಲರಾದ ಡಾ. ಎಂ. ಎಲ್. ಹರೇಂದ್ರ ಕುಮಾರ್ ಅವರು, ಹೈಬ್ರಿಡ್ ಮೋಡ್: ಆನ್‌ಲೈನ್ ಮತ್ತು ಆಫ್‌ಲೈನ್ ಮೋಡ್‌ನಲ್ಲಿ ನಿರಂತರ ವೈದ್ಯಕೀಯ ಶಿಕ್ಷಣ (ಸಿಎಂಇ) ಆಯೋಜಿಸಲಾಗಿದೆ. ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಕೇರಳ, ತಮಿಳುನಾಡು ಮತ್ತು ಕರ್ನಾಟಕ ಸೇರಿದಂತೆ ನೆರೆಯ ರಾಜ್ಯಗಳಿಂದ ಒಟ್ಟು 238 ಪ್ರತಿನಿಧಿಗಳು ಪಾಲ್ಗೊಂಡಿದ್ದರು ಎಂದು ವಿವರಿಸಿದರು.

2ನೇ ಎಂ.ಬಿ.ಬಿ.ಎಸ್.ನಲ್ಲಿ ಪೆಥಾಲಜಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ (ಶೇಕಡ 80 ಮತ್ತು ಅದಕ್ಕಿಂತ ಹೆಚ್ಚಿನ) ಮೂವರು ವಿದ್ಯಾರ್ಥಿಗಳಿಗೆ ಡಾ ಎಂ. ಆರ್.ಹುಲಿನಾಯ್ಕರ್ ಅವರು ಪ್ರಶಸ್ತಿ ನೀಡಿ ಪುರಸ್ಕರಿಸಿದರು. ರೋಗಶಾಸ್ತ್ರ ವಿಭಾಗದಲ್ಲಿ ನಡೆಸಿದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನಾಲ್ಕು ವಿದ್ಯಾರ್ಥಿಗಳನ್ನು ವೈದ್ಯಕೀಯ ನಿರ್ದೇಶಕ ಡಾ. ರಮಣ ಎಂ ಹುಲಿನಾಯ್ಕರ್ ಸನ್ಮಾನಿಸಿದರು. ಅಲ್ಲದೆ, ಉಪನ್ಯಾಸ ನೀಡಿದ ಮಹನೀಯರನ್ನು ಗೌರವಿಸಲಾಯಿತು.

ಈ ಸಂದರ್ಭ ನಾನಾವಿಭಾಗದ ಮುಖ್ಯಸ್ಥರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪ್ರಸ್ತುತ ಅವಶ್ಯಕತೆಗಳು ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಈ ಸಿ.ಎಂ.ಇ. ಕಾರ್ಯಕ್ರಮ ಬಹಳ ಅರ್ಥಪೂರ್ಣವಾಗಿತ್ತು ಎಂದು ಗಣ್ಯರು ಶ್ಲಾಘಿಸಿದರು. ಸಂಘಟನಾ ಅಧ್ಯಕ್ಷರಾದ ಡಾ. ಗಿರೀಶ್ ವಿ ಎ ಸ್ವಾಗತಿಸಿದರು. ಸಂಘಟನಾ ಕಾರ್ಯದರ್ಶಿ ಡಾ. ಕೃಷ್ಣ ಎಂ. ಸಿ. ವಂದಿಸಿದರು.

■ ವರದಿ: ಡಾ. ಗಿರೀಶ್ ವಿ ಎ

# ಗಡಿನಾಡಿನ ಹಳ್ಳಿಗಳ ಮಕ್ಕಳ ನೇತ್ರಚಿಕಿತ್ಸೆಗೊಂದು ಹೊಸ ಕಾರ್ಯಕ್ರಮ

◀◀ ...ಮೊದಲನೇ ಪುಟದಿಂದ

ಸಭೆಗೆ ಮುನ್ನ ಜಗತ್ಪ್ರಸಿದ್ಧಿ ಪಡೆದಿರುವ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಕಣ್ಣಿನ ಚಿಕಿತ್ಸೆಯಲ್ಲಿ ದಾಖಲೆ ಸೃಷ್ಟಿಸಿರುವ ಶ್ರೀಶಾರದಾದೇವಿ ಕಣ್ಣಿನ ಆಸ್ಪತ್ರೆಯ ಸೇವಾಕಾರ್ಯಗಳನ್ನು ಎಲ್ಲರಿಗೂ ತಿಳಿಸಲಾಯಿತು.

ಈ ನಿಟ್ಟಿನಲ್ಲಿ ಅತ್ಯಾವಶ್ಯಕವಾದ ಮಕ್ಕಳ ನೇತ್ರಚಿಕಿತ್ಸೆ, ಮತ್ತು ಮತ್ತೊಂದು ಅದ್ಭುತ, ಅಮೋಘ ಶಸ್ತ್ರಚಿಕಿತ್ಸೆ ಮತ್ತು ದೃಷ್ಟಿದೋಷ ನಿವಾರಣಾ ಚಿಕಿತ್ಸೆಗಳನ್ನು ಸಂಪೂರ್ಣವಾಗಿ ಉಚಿತವಾಗಿ ನೀಡುವ ಯೋಜನೆ ರೂಪಿಸಲು ಚರ್ಚೆ ನಡೆಸಲಾಯಿತು. ಅದರಲ್ಲಿ ಉಚಿತವಾಗಿ ಕನ್ನಡಕಗಳನ್ನು ನೀಡುವುದನ್ನು ಸೇರಿಸಲಾಯಿತು.

ಭವಿಷ್ಯದ ಭರವಸೆ ಎಂದು ಕರೆಲಾಗುವ ಪುಟ್ಟ ಮಕ್ಕಳು, ವಿದ್ಯಾರ್ಥಿ/ವಿದ್ಯಾರ್ಥಿನಿಯರು (15 ವರ್ಷದ ಕೆಳಗಿನ) ಅಂದರೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಈ ಯೋಜನೆಯಲ್ಲಿ ವಿಶೇಷವಾದ ಆದ್ಯತೆ ನೀಡಲಾಗುತ್ತದೆ. ಈ ಯೋಜನೆಯ ಪ್ರಕಾರ ಪಾವಗಡ ತಾಲ್ಲೂಕಿನ ಗಡಿ ಭಾಗದ ಮಕ್ಕಳಿಗೆ ಈ ಸೇವೆಯನ್ನು ನೀಡುವ ಸಲುವಾಗಿ ಉನ್ನತ ಮಟ್ಟದ ಸಭೆ ನಡೆಯಿತು.

ಈ ಸಭೆಯಲ್ಲಿ ಡಾ.ರಮಣ್ ಎಂ. ಹುಲಿನಾಯ್ಕರ್ ಅವರು "ಮಕ್ಕಳ ನೇತ್ರಚಿಕಿತ್ಸೆಯಲ್ಲಿ ಪ್ರಖ್ಯಾತಿ ಪಡೆದಿರುವ ನಯೋನಿಕಾ ಕೇಂದ್ರ, ಪಾವಗಡದ ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಮತ್ತು ನಮ್ಮ ಶ್ರೀದೇವಿ ವೈದ್ಯಕೀಯ ಕಾಲೇಜು – ಹೀಗೆ ಮೂರೂ ಸಂಸ್ಥೆಗಳ ಸಹಕಾರದೊಂದಿಗೆ ಯೋಜನೆಯನ್ನು ರೂಪಿಸಿ, ಅದನ್ನು ಅನುಷ್ಠಾನ ಮಾಡಲಾಗುವುದು" ಎಂದರು.

ನಂತರ ಯೋಜನೆಯ ಕುರಿತು ಪೂರ್ಣ ಮಾಹಿತಿ ಪಡೆದು ಕಾರ್ಯಯೋಜನೆಯ ಬಗ್ಗೆ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದ ಸಂಘಟಿತ ಗ್ರಾಮಾಂತರ ಆರೋಗ್ಯ ಕೇಂದ್ರದ ಹಿರಿಯ ಹಾಗೂ ಅನುಭವಿ ತಜ್ಞರಾದ ಡಾ.ಚಂದ್ರಕಲಾ ಜಿ.ಆರ್, ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆ ಸಂಶೋಧನಾ ಕೇಂದ್ರದ ಹಿರಿಯ ತಜ್ಞರುಗಳಾದ ಡಾ.ಅಭಿಷೇಕ್ ಮತ್ತು ಡಾ.ಕೀರ್ತಿ ಅಭಿಷೇಕ್ ಅವರುಗಳು ಭಾಗವಹಿಸಿದ್ದರು. ಜೊತೆಗೆ ಆಡಳಿತ ಮಂಡಳಿಯ ಮುಖ್ಯಸ್ಥರಾದ ಶ್ರೀಮತಿ ಕೆ.ಶೋಭಾ ಅವರು ಭಾಗವಹಿಸಿದ್ದರು.

ಬೆಂಗಳೂರಿನ ನಯೋನಿಕಾ ಸಂಸ್ಥೆಯು ಈಗಾಗಲೇ ಕೋವಿಡ್ ಸಂದರ್ಭದಲ್ಲಿ ಅದ್ಭುತವಾದ ಸೇವಾ ಕಾರ್ಯಗಳನ್ನು ಮಾಡಿ ಯಶಸ್ವಿಯಾಗಿದ್ದಾರೆ. ತದನಂತರ ಮಕ್ಕಳ ನೇತ್ರಚಿಕಿತ್ಸಾ ಯೋಜನೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುವ ಅಂತಾರಾಷ್ಟ್ರೀಯ ಸಂಸ್ಥೆ. ಈ ಸಂಸ್ಥೆಯು 14 ಲಕ್ಷ ಮಕ್ಕಳಿಗೆ ಕಣ್ಣಿನ ತಪಾಸಣೆ ನಡೆಸಿದ್ದಾರೆ 42 ಸಾವಿರ ಶಸ್ತ್ರಚಿಕಿತ್ಸೆಗಳನ್ನು ಮಾಡಿ 91,500 ಉಚಿತ ಕನ್ನಡಕಗಳನ್ನು ವಿತರಿಸಿದ್ದಾರೆ. ಇದರಿಂದಲೇ ಇದೊಂದು ಅದ್ಭುತ ಸೇವಾ ಸಂಸ್ಥೆಯೆಂದು ಖ್ಯಾತಿ ಪಡೆದಿದೆ. ಈ ಸಂಸ್ಥೆ ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಮತ್ತು ಶ್ರೀದೇವಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಸಹಯೋಗದಲ್ಲಿ ಈ ಯೋಜನೆಯನ್ನು ಆರಂಭಿಸುತ್ತಿರುವುದು ನಿಜಕ್ಕೂ ಪಾವಗಡ ತಾಲ್ಲೂಕಿನ ಗಡಿಭಾಗದ ಸುತ್ತಮುತ್ತಲಿನ ನೂರಾರು ಗ್ರಾಮಗಳಿಗೆ ವರದಾನವಾಗಿದೆ ಎಂದರೆ ತಪ್ಪಿಲ್ಲ.



ಶ್ರೀ ಬ್ರಹ್ಮದೇವಯ್ಯ, ಶ್ರೀಪ್ರಶಾಂತ್, ಡಾ.ಲಾವಣ್ಯ ರಮಣ್, ಪೂಜ್ಯ ಜಪಾನಂದಸ್ವಾಮಿಗಳು, ಡಾ.ರಮಣ್ ಹುಲಿನಾಯ್ಕರ್, ಡಾ.ಅಭಿಷೇಕ್ ಮತ್ತು ಕೀರ್ತಿ ಅಭಿಷೇಕ್.



ತಮ್ಮಲ್ಲಿರುವ ವೈದ್ಯಕೀಯ ಉಪಕರಣಗಳನ್ನು ಪರಿಚಯಿಸುತ್ತಿರುವ ಪೂಜ್ಯ ಜಪಾನಂದಸ್ವಾಮಿಗಳು.

ಈ ತೆರನಾದ ಯೋಜನೆಗಳನ್ನು ನಯೋನಿಕಾ ಸಂಸ್ಥೆ ಈಗಾಗಲೇ ಕರ್ನಾಟಕದ ಉತ್ತರ ಭಾಗದಲ್ಲಿ ಏಳು ಜಿಲ್ಲೆಗಳಲ್ಲಿ ಆರಂಭಿಸಿದೆ. ಈ ಯೋಜನೆಯನ್ನು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಅನುಮೋದಿಸಿದೆ. ಈ ಯೋಜನೆ ಪಾವಗಡ ತಾಲ್ಲೂಕಿನಲ್ಲಿ ಗಡಿ ಭಾಗದ ಕುಗ್ರಾಮಗಳಲ್ಲಿ ಅತ್ಯುನ್ನತ ಮಟ್ಟದ ನೇತ್ರಚಿಕಿತ್ಸೆ ನೀಡುವುದಕ್ಕೆ ಮುಂದೆ ಬಂದಿರುವುದು ಈ ಭಾಗದ ಮಕ್ಕಳ ಸೌಭಾಗ್ಯವೇ ಸರಿ.


ಪಾವಗಡದ ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಕಳೆದ ಎರಡೂವರೆ ದಶಕಗಳಿಂದ ಮಕ್ಕಳ ನೇತ್ರ ಚಿಕಿತ್ಸಾ ಯೋಜನೆಯನ್ನು ಅನುಷ್ಠಾನ ಮಾಡುತ್ತಾ ಬರುತ್ತಿದೆ. ಪ್ರಖ್ಯಾತ ಮಕ್ಕಳ ನೇತ್ರ ಚಿಕಿತ್ಸಾ ತಜ್ಞರಾದ ಡಾ.ವಸುಧಾ ನರೇಶ್ ಮತ್ತು ಅವರ ತಂಡ ಅದ್ಭುತವಾದ ಕಾರ್ಯ ಮಾಡುತ್ತಿರುವ ವಿಚಾರ ಎಲ್ಲರಿಗೂ ತಿಳಿದಿದೆ.

ಈ ಯೋಜನೆಯ ಪ್ರಕಾರ ವಾರದಲ್ಲಿ ಒಂದು ದಿನ ಮಕ್ಕಳ ನೇತ್ರತಜ್ಞರು ಹಾಗೂ ಸಹಾಯಕ ತಜ್ಞರುಗಳು ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ಉಪಸ್ಥಿತರಿದ್ದು ತಾಲ್ಲೂಕಿನ ಹಾಗೂ ಗಡಿ ಭಾಗದ ಎಲ್ಲ ಶಿಶುಗಳಿಗೆ, ಮಕ್ಕಳಿಗೆ ಹಾಗೂ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ (15 ವರ್ಷ ಒಳಗಿನ) ಸಂಪೂರ್ಣ ಉಚಿತವಾಗಿ ಕಣ್ಣಿನ ಚಿಕಿತ್ಸೆ, ಶಸ್ತ್ರಚಿಕಿತ್ಸೆ ಮತ್ತು ಕನ್ನಡಕಗಳನ್ನು ನೀಡುತ್ತಿದ್ದಾರೆ. ಇದರಿಂದಾಗಿ ಪೂಜ್ಯ ಸ್ವಾಮಿ ಜಪಾನಂದಜೀ ಮಹಾರಾಜ್ ಅವರ ಅನೇಕ ವರ್ಷಗಳ ದೊಡ್ಡ ಕನಸು ಈಡೇರಿದಂತಾಗಿದೆ. ಈ ಯೋಜನೆಯ ಅನುಷ್ಠಾನದಲ್ಲಿ ವಿವಿಧ ಇಲಾಖೆಗಳ ಸಹಾಯವಿದೆ.

ಪಾವಗಡ ತಾಲ್ಲೂಕಿನಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಒಟ್ಟು 323 ಶಾಲೆಗಳಿವೆ, 29,842 ವಿದ್ಯಾರ್ಥಿ/ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. 'ವಿವೇಕ ಕಿರಣ' ಯೋಜನೆಯ ಮೂಲಕ ದೃಷ್ಟಿದೋಷವುಳ್ಳ ಮಕ್ಕಳು, ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸಂಪೂರ್ಣ ಉಚಿತ ನೇತ್ರಚಿಕಿತ್ಸೆ ಹಾಗೂ ಕನ್ನಡಕಗಳನ್ನು ನೀಡಲಾಗಿದೆ. ಹಾಗೆಯೇ ಗಡಿ ಭಾಗದಲ್ಲಿರುವ ಆಂಧ್ರಪ್ರದೇಶದ 300 ಗ್ರಾಮಗಳಿಗೆ ಈ ಯೋಜನೆಯನ್ನು ವಿಸ್ತರಿಸುವ ಉದ್ದೇಶವಿದೆ. ಒಟ್ಟಿನಲ್ಲಿ 525 ಗ್ರಾಮ ಮತ್ತು ತಾಂಡಗಳ, ಮಕ್ಕಳ ದೃಷ್ಟಿದೋಷವನ್ನು ಪರಿಹಾರ ಮಾಡುವ ಬೃಹತ್ ಯೋಜನೆ ಸದ್ಯದಲ್ಲೇ ಕಾರ್ಯರೂಪಕ್ಕೆ ಬರುತ್ತದೆ. ಈ ಯೋಜನೆಯ ರೂವಾರಿ ಪರಮ ಪೂಜ್ಯ ಸ್ವಾಮಿ ಜಪಾನಂದಜೀ ಮಹಾರಾಜ್ ಅವರು ಈ ವಿಷಯ ಹೇಳಿದ್ದಾರೆ.

ಪರಮ ಪೂಜ್ಯ ಸ್ವಾಮಿ ಜಪಾನಂದಜೀ ಮಹಾರಾಜ್, ಡಾ.ರಮಣ್ ಹುಲಿನಾಯ್ಕರ್, ಡಾ.ಲಾವಣ್ಯ ಹಾಗೂ ಶ್ರೀಪ್ರಶಾಂತ್ ಅವರುಗಳ ತಂಡ ತಾಲ್ಲೂಕಿನ ಪ್ರತಿಯೊಂದು ಶಾಲೆಯನ್ನೂ ಬಿಡದಂತೆ ಭೇಟಿ ನೀಡಿ ಆರೋಗ್ಯ ಅದರಲ್ಲೂ ಮುಖ್ಯವಾಗಿ ಮಕ್ಕಳ ನೇತ್ರಗಳ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಇಂತಹ ಯೋಜನೆಯಿಂದ ಈ ಭಾಗದ ಮಕ್ಕಳಿಗೆ ಖಂಡಿತ ಲಾಭದಾಯಕವಾಗುತ್ತದೆ. ಈ ಯೋಜನೆ ಸಂಪೂರ್ಣ ಉಚಿತವಾಗಿದ್ದು ಶ್ರೀ ಶಾರದಾದೇವಿ ಹಾಗೂ ಶ್ರೀದೇವಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವುದು ಅತ್ಯಂತ ಶ್ಲಾಘನೀಯವಾದ ವಿಷಯವೇ ಸರಿ.

ಈ ಯೋಜನೆಗೆ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಮತ್ತಿತರ ಇಲಾಖೆಗಳ ಅತ್ಯಮೂಲ್ಯ ಸಹಕಾರ ದೊರೆಯುವುದರಲ್ಲಿ ಸಂಶಯವಿಲ್ಲವೆಂದು ಪೂಜ್ಯ ಸ್ವಾಮಿ ಜಪಾನಂದಜೀ ಮಹಾರಾಜ್ ಅವರು ಅಭಿಪ್ರಾಯಪಡುತ್ತಾರೆ. ಈ ಯೋಜನೆ ಸದ್ಯದಲ್ಲಿಯೇ ಆರಂಭವಾಗುತ್ತದೆ. ಇದರ ಬಗ್ಗೆ ಒಡಂಬಡಿಕೆಗಳು ಮೊದಲಾದ ಪ್ರಾಥಮಿಕ ಕೆಲಸಗಳು ಪೂರ್ಣಗೊಂಡಿವೆ. ಈ ಯೋಜನೆಗೆ "ಕಿರಣ" ಎಂಬ ಹೆಸರನ್ನು ನೀಡಲಾಗಿದೆ.



## ನೆನಪಿನಲ್ಲಿಡಬೇಕಾದ ಮಾತು

ಈ ಶತಮಾನದ ಅದ್ಭುತಗಳಾಗಿ ಎವರೆಸ್ಟ್ ಹತ್ತಿದ್ದು, ಉಪಗ್ರಹ ಹಾರಿಸಿದ್ದು, ಚಂದ್ರನಲ್ಲಿ ಇಳಿದಿದ್ದು, ಕಂಪ್ಯೂಟರ್ ಚಿಪ್ಪುಗಳನ್ನು ತಯಾರಿಸಿದ್ದು, ಕಣ್ಣು ಕೋರೈಸುವ ಸಾಧನೆಗಳಾದ್ದರಿಂದ ಜನಪ್ರಿಯತೆಯನ್ನೂ ಪ್ರಚಾರವನ್ನೂ ಪಡೆದುಕೊಳ್ಳುತ್ತವೆ. ಆದರೆ ಈ ಶತಮಾನದ ಸಾಧನೆ ಎಂದು ಯಾವುದಾದರು ಒಂದೇ ಒಂದು ಸಾಧನೆಯನ್ನು ಹೇಳು ಎಂದು ನನ್ನನ್ನು ಯಾರಾದರೂ ಕೇಳಿದರೆ ನಾನು ನಿಸ್ಸಂಶಯವಾಗಿ 'ವಿಶ್ವ ಆರೋಗ್ಯ ಸಂಸ್ಥೆ ಸಿಡುಬನ್ನು ಈ ಭೂಮಂಡಲದಿಂದಲೇ ಉಚ್ಚಾಟಿಸಿದ್ದು' ಎಂದು ನಾನು ಹೇಳುತ್ತೇನೆ. ಇದು ಇದ್ದಕ್ಕಿದಂತೆ ದಿಢೀರೆಂದು ಯಾರೋ ಒಬ್ಬ ಸಹಸ್ರಾರು ಜನರ ಸಮ್ಮುಖದಲ್ಲಿ ಸಾಧಿಸಿ ಚಪ್ಪಾಳೆ ಗಿಟ್ಟಿಸಿದಂಥ ಸಾಧನೆಯಲ್ಲ! ನೂರಾರು ದೇಶಗಳ ಸಹಸ್ರಾರು ಕಾರ್ಯಕರ್ತರು ಮಳೆ ಬಿಸಿಲೆನ್ನದೇ, ಕಗ್ಗಾಡು ಮರಳುಗಾಡೆನ್ನದೇ ಅನೇಕ ವರ್ಷಗಳ ಕಾಲ ಕೆಲಸ ಮಾಡಿ ಸಾಧಿಸಿದ ಯಶಸ್ಸು. ನಾಗರಿಕತೆಗಳ ಹುಟ್ಟಿನಿಂದಲೂ ಸತತವಾಗಿ ಸಾವಿರಾರು ಜನಗಳನ್ನು ಬಲಿ ತೆಗೆದುಕೊಂಡ, ವಿರೂಪಗೊಳಿಸಿದ, ಕುರುಡರನ್ನಾಗಿ ಮಾಡಿದ ಈ ಮಹಾಮಾರಿಯಿಂದ ಮನುಕುಲವನ್ನೇ ವಿಮುಕ್ತಿಗೊಳಿಸಿದ್ದು ಈ ಶತಮಾನದ ಮನುಷ್ಯ ಸದ್ದುಗದ್ದಲವಿಲ್ಲದೆ ಸಾಧಿಸಿದ ಆತ್ಯಮೋಘ ಸಾಧನೆ. ಈ ಸಾಧನೆಯಿಂದ ಹಿಂದುಳಿದ ರಾಷ್ಟ್ರಗಳ ಕೋಟ್ಯಂತರ ದೀನರ ಬಡವರ ಆಹುತಿ ತಪ್ಪಿತು. ಇದಕ್ಕಿಂತ ಹೆಚ್ಚಾಗಿ ಇಡೀ ಮನುಕುಲಕ್ಕೆ ಇದರಿಂದ ಒದಗಿದ ಆತ್ಮವಿಶ್ವಾಸಕ್ಕೆ ಬೆಲೆಕಟ್ಟಲು ಸಾಧ್ಯವಿಲ್ಲ.

– ಕೆ.ಪಿ.ಪೂರ್ಣಚಂದ್ರ ತೇಜಸ್ವಿ

# ಡಾ. ವಿದ್ಯಾವಾಚಸ್ಪತಿ ವ್ಯಾಸನಕೆರೆ ಪ್ರಭಂಜನಾಚಾರ್ಯರ ಅಪೂರ್ವ ಕೃತಿ ಭೀಮಪರ್ವ



▪ ಡಾ.ಜಿ.ವಿ.ಕುಲಕರ್ಣಿ
ಮುಂಬೈ

ವಿದ್ಯಾವಾಚಸ್ಪತಿ, 'ಶಾಸ್ತ್ರಪ್ರವಚನ ಕೇಸರಿ' ಮುಂತಾದ ಬಿರುದುಗಳಿಂದ ಪ್ರಸಿದ್ಧರಾದ ಪಂಡಿತ ಡಾ.ವ್ಯಾಸನಕೆರೆ ಪ್ರಭಂಜನಾಚಾರ್ಯರು ಕನ್ನಡನಾಡು ಕಂಡ ಅಪ್ರತಿಮ ಬಹುಶ್ರುತ ವಿದ್ವಾಂಸರು. ಸಂಸ್ಕೃತದಲ್ಲಿ ಬಿ.ಎ. ಹಾಗೂ ಎಂ.ಎ.ಪದವಿಗಳನ್ನು ಪಡೆದರು, ನಂತರ ಡಿ.ಲಿಟ್ ಪದವಿಯನ್ನು ಕೂಡ ಗಳಿಸಿದರು. ಸರಕಾರಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ದುಡಿದು, ಸ್ವಯಂ ನಿವೃತ್ತಿಯನ್ನು ಪಡೆದು ಶಾಸ್ತ್ರಾಭ್ಯಾಸ, ಸಂಶೋಧನೆ, ಗ್ರಂಥ ಪ್ರಕಟಣೆಯ ಕಾರ್ಯದಲ್ಲಿ ಪೂರ್ಣಾವಧಿ ತೊಡಗಿದರು. ಕಾಲೇಜಿನ ರಜಾದಿನಗಳನ್ನು ಪ್ರವಾಸ ಕೈಕೊಂಡರು, ವಿಶೇಷವಾಗಿ ಕರ್ನಾಟಕ, ಆಂಧ್ರ, ತಮಿಳುನಾಡಿನಲ್ಲಿ ಪ್ರವಚನ ನೀಡಿದರು. ಆಗ ಸಹಸ್ರಾರು ತಾಳೆಯೋಲೆ ಗ್ರಂಥಗಳನ್ನು ಸಂಗ್ರಹಿಸಿದರು. 'ವ್ಯಾಸಮಧ್ವ ಸಂಶೋಧನ ಪ್ರತಿಷ್ಠಾನ'ವನ್ನು ಸ್ಥಾಪಿಸಿದರು. ಸರ್ವಮೂಲಗ್ರಂಥಗಳನ್ನು, ದಾಸಸಾಹಿತ್ಯಕ್ಕೆ ಸಂಬಂಧಿಸಿದ ನೂರಾರು ಪುಸ್ತಕಗಳನ್ನು ಪ್ರಕಟಿಸಿದರು. ಅವರ ಪ್ರವಚನಗಳ ಸಹಸ್ರಾರು ಧ್ವನಿಮುದ್ರಿಕೆಗಳು ಲಕ್ಷಾವಧಿ ಭಕ್ತರರನ್ನು ತಲುಪಿವೆ. ಅವರು 'ವ್ಯಾಸ–ಮಧ್ವ' ಮಾಸ ಪತ್ರಿಕೆಯನ್ನು ನಡೆಸುತ್ತಾರೆ.


ಅವರಿಗೆ 2005ರಲ್ಲಿ ರಾಷ್ಟ್ರಪತಿ ಪ್ರಶಸ್ತಿ ದೊರಕಿತ್ತು. ಅವರ ಇತ್ತೀಚಿನ ಸಂಶೋಧನ ಕೃತಿ ಭೀಮಪರ್ವ ಪ್ರಕಟವಾಗಿದೆ. (ಐತರೇಯ ಪ್ರಕಾಶನ, ಬೆಂಗಳೂರು–19, ಫೋನ್080–26602802, ಪ್ರಥಮ ಆವೃತ್ತಿ 2024, ಪುಟ 316, ಬೆಲೆ ರೂ.125).

ಈ ಗ್ರಂಥದಲ್ಲಿ ಕೆಲವು ಮಹತ್ವದ ಮಾತುಗಳನ್ನು ಡಾ.ಪ್ರಭಂಜನಾಚಾರ್ಯರು ಹೇಳುತ್ತಾರೆ. ಮಾಹಾಭಾರತವನ್ನು ಆಧರಿಸಿದ ಹಲವು ಕೃತಿಗಳು ಭಾರತೀಯ ಭಾಷೆಗಳಲ್ಲಿ ಪ್ರಕಟವಾಗಿವೆ. ರಾಜಾಶ್ರಯದ ಕಾರಣದಿಂದಲೋ ಬೇರೆ ಉದ್ದೇಶಗಳಿಂದಲೋ ಅವುಗಳು ಮೂಲ ವೇದವ್ಯಾಸರ 'ಮಹಾಭಾರತ'ಕ್ಕೆ ನಿಷ್ಠವಾಗಿಲ್ಲ.

ಪುಣೆಯ ಮಹಾಭಾರತ ಸಂಪುಟಗಳ ಪ್ರಕಾಶನದ ಪ್ರಧಾನ ಸಂಪಾದಕರಾದ ಡಾ.ವಿ.ಎಸ್. ಸುಕ್ಥಂಕರ್ ಅವರು ತಮ್ಮ Meaning of Mahabharatha ಎನ್ನುವ ಕೃತಿಯಲ್ಲಿ " 13ನೇ ಶತಮಾನದಲ್ಲಿದ್ದ ಶ್ರೀ ಮಧ್ವಾಚಾರ್ಯ ಅವರ 'ಮಹಾಭಾರತ ತಾತ್ಪರ್ಯ ನಿರ್ಣಯ' ಎನ್ನುವ ಗ್ರಂಥದಲ್ಲಿ" ಶ್ರೀಮಧ್ವಾಚಾರ್ಯರು ಮಹಾಭಾರತ ಮೂಲ ಆಶಯವನ್ನು ಸಮರ್ಥವಾಗಿ ಅರ್ಥೈಸಿದ್ದಾರೆ. ಅದರ ಆಶಯಕ್ಕೆ ಅನುಗುಣವಾಗಿ ಅವರ ವ್ಯಾಖ್ಯಾನವಿದೆ. ಆ ಮಹಾಕಾವ್ಯದಲ್ಲಿ ಬರುವ ಅಧ್ಯಾತ್ಮ, ತಾತ್ವಿಕ ಚಿಂತನೆ, ಪಾತ್ರ ಪರಿಚಯ, ಸಂಕೇತಗಳ ಅನಾವರಣ, ಮನೋವಿಜ್ಞಾನದ ವಿಶ್ಲೇಷಣೆ, ದರ್ಶನ ಮೊದಲಾದ ವಿಚಾರಗಳಲ್ಲಿ ಶ್ರೀವೇದವ್ಯಾಸರಿಗೆ ನ್ಯಾಯ ಸಲ್ಲಿಸಿದ್ದಾರೆ. ಈ ದೃಷ್ಟಿಯಿಂದ ಇದೊಂದು ಮಹಾಭಾರತದ ಏಕೈಕ ಸಮರ್ಥ ವ್ಯಾಖ್ಯಾನವಾಗಿದೆ." ಎಂದಿದ್ದಾರೆ.

ಮಹಾಭಾರತದಲ್ಲಿ ಭೀಷ್ಮಪರ್ವ, ದ್ರೋಣಪರ್ವ, ಕರ್ಣಪರ್ವ ಮೊದಲಾದವುಗಳಿರುವಂತೆ ಭೀಮಪರ್ವ ಏಕಿಲ್ಲ? ಎನ್ನುವುದು ಡಾ. ಪ್ರಭಂಜನಾಚಾರ್ಯರ ಪ್ರಶ್ನೆಯಾಗಿದೆ. ಇಡೀ ಮಹಾಭಾರತವೇ ಭೀಮಪರ್ವ ಆಗಿದೆ ಎನ್ನುವುದನ್ನು ಈ ಗ್ರಂಥದಲ್ಲಿ ಅನೇಕ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ.

ಭೀಮನಂತಹ ಧೀರೋದಾತ್ತ ಪಾತ್ರಕ್ಕೆ ಸಮಾನವಾದುದು ಮಹಾಭಾರತದಲ್ಲಿ ಇನ್ನೊಂದಿಲ್ಲ. ಬಾಲ್ಯದಿಂದಲೇ ಭೀಮನ




**ಮಹಾಭಾರತದಲ್ಲಿ ಭೀಷ್ಮಪರ್ವ, ದ್ರೋಣಪರ್ವ, ಕರ್ಣಪರ್ವ ಮೊದಲಾದವುಗಳಿರುವಂತೆ ಭೀಮಪರ್ವ ಏಕಿಲ್ಲ? ಎನ್ನುವುದು ಡಾ. ಪ್ರಭಂಜನಾಚಾರ್ಯರ ಪ್ರಶ್ನೆಯಾಗಿದೆ. ಇಡೀ ಮಹಾಭಾರತವೇ ಭೀಮಪರ್ವ ಆಗಿದೆ ಎನ್ನುವುದನ್ನು ಈ ಗ್ರಂಥದಲ್ಲಿ ಅನೇಕ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ.**

ಪಾತ್ರವನ್ನು ನೋಡಬಹುದು. ಆದಿಪರ್ವದಲ್ಲಿ ಕುರುಪಾಂಡವರ ಜನನ ವೃತ್ತಾಂತವಿದೆ. ಭೀಮ ಹತ್ತು ದಿವಸದ ಮಗು ಇದ್ದಾಗ ಕುಂತಿಯ ಕೈಯಿಂದ ಜಾರಿ ಶತಶೃಂಗ ಪರ್ವತದ ಮೇಲೆ ಉರುಳಿದಾಗ ಆ ಪರ್ವತವೇ ನೂರಾರು ಹೋಳಾಯಿತಂತೆ! ಇಂಥ ಅಗಾಧ ಶಕ್ತಿ ಇದ್ದವ ಭೀಮ ಮಾತ್ರ. ಮುಂದೆ ಬಾಲಲೀಲೆಯ ಪ್ರಸಂಗ. ಹಾರುವುದು, ಓಡುವುದು, ಈಜುವುದು, ಕುಸ್ತಿ– ಯಾವುದರಲ್ಲೂ ಭೀಮನದೇ ಮೇಲುಗೈ. ಭೀಮನನ್ನು ಇಲ್ಲವಾಗಿಸುವ ಕೌರವರ ಪ್ರಯತ್ನಗಳೆಲ್ಲ ವಿಫಲವಾದವು. ಭೋಜನದಲ್ಲಿ ಕಾಲಕೂಟ ವಿಷ ಸೇರಿಸಿ ಭೀಮನಿಗೆ ಕೊಡಲಾಯಿತು. ಸಂಪೂರ್ಣ ತಿಂದು ಜೀರ್ಣಿಸಿಕೊಂಡವ ಭೀಮ. ಅರಗಿನಮನೆ ಮೊದಲಾದ ಪ್ರಸಂಗಗಳಲ್ಲಿ ಭೀಮನದೇ ಮುಖ್ಯ ಪಾತ್ರ. ಅರ್ಜುನ ಮೊದಲಾದವರ ಪಾತ್ರ ನಗಣ್ಯ.

ಅರಗಿನ ಮನೆಯಿಂದ ಎಲ್ಲ ಪಾಂಡವರು ಸುರಕ್ಷಿತವಾಗಿ ಹೊರಬಂದದ್ದು ಭೀಮನಿಂದ. ಕಾಡಿನಲ್ಲಿ, ಕಾರಿರುಳಿನಲ್ಲಿ ನಡೆಯಲಾಗದ ಕುಂತಿ ಅರ್ಜುನಾದಿಗಳನ್ನು ಮೈಮೇಲೆ ಹೊತ್ತುಕೊಂಡು ಮುನ್ನಡೆದವ ಭೀಮಸೇನ. ಏಕಚಕ್ರನಗರಿ ಸೇರಿದಾಗ ಬಕಾಸುರನನ್ನು ಕೊಂದವ ಭೀಮ. ದ್ರೌಪದೀ ಸ್ವಯಂವರ ಪ್ರಸಂಗ. ಮತ್ಸ್ಯಯಂತ್ರಭೇದವನ್ನು ಮಾಡಬಲ್ಲ ಸಾಮರ್ಥ್ಯ ಭೀಮನದಾಗಿತ್ತು. ಆದರೆ ಆ ಅವಕಾಶವನ್ನು ಅರ್ಜುನನಿಗೆ ನೀಡಿದ್ದು ಭೀಮನ ಉದಾತ್ತತೆ. ಭೀಮನಿಗೆ ಆ ಸಾಮರ್ಥ್ಯವಿದ್ದ ಉಲ್ಲೇಖ ಮಹಾಭಾರತದಲ್ಲಿಯೇ ದ್ರೌಪದಿಯ ಬಾಯಿಯಿಂದ ಉಲ್ಲೇಖಿಸಲ್ಪಟ್ಟಿರುವುದು ಗಮನಾರ್ಹ ಸಂಗತಿ. ಕಾಶೀಕ್ಷೇತ್ರದಲ್ಲಿ ನಡೆದ ಕಾಳೀಸ್ವಯಂವರದಲ್ಲಿ ಭೀಮಸೇನ ಜರಾಸಂಧ ಮೊದಲಾದ ಸಮಸ್ತ ಬಲಶಾಲಿಗಳನ್ನು ಒಂಟಿಯಾಗಿ ಸದೆಬಡೆದ ಮಹಾಶೂರ. ದ್ರೌಪದಿಯ ವಸ್ತ್ರಾಪಹರಣದಂತಹ ಅತ್ಯಂತ ಹೇಯಕಾರ್ಯಕ್ಕೆ ತೊಡಗಿದ ದುರ್ಯೋಧನಾದಿಗಳನ್ನು ತನ್ನ ಘೋರ ಶಪಥದಿಂದ ತಣ್ಣಗಾಗಿರಿಸಿದ ಹಿರಿಮೆಯೂ ಭೀಮನದೇ.

ವನಪರ್ವದಲ್ಲಿ ನಡೆದ ಕಿರ್ಮೀರ, ಜಟಾಸುರ ಮೊದಲಾದವರ ವಧೆ, ವಿರಾಟಪರ್ವದಲ್ಲಿ ಕೀಚಕ, ಉಪಕೀಚಕರ ವಧೆ, ದಕ್ಷಿಣಗೋಗ್ರಹಣದಲ್ಲಿ ವಿರಾಟನ ವಿಮೋಚನೆ, ಗೋವುಗಳ ವಿಮೋಚನೆ ನಡೆದದ್ದು ಭೀಮನಿಂದಲೇ.

ಉದ್ಯೋಗಪರ್ವದಲ್ಲಿ ಭೀಮನ ಸಾಮರ್ಥ್ಯ ಜನ ತಿಳಿದದ್ದಕ್ಕಿಂತ ಸಹಸ್ರಾರು ಪಟ್ಟು ಮಿಗಿಲು ಎಂದು ಸ್ವತಃ ಭಗವಂತನಾದ ಶ್ರೀಕೃಷ್ಣ ಮಾಡಿದ ಪ್ರಶಂಸೆ. ಮುಂದೆ ನಡೆಯುವ ಮಹಾಯುದ್ಧದ ಭಾರ ಸಂಪೂರ್ಣವಾಗಿ ಭೀಮನ ಮೇಲಿದೆ ಎಂಬ ಕೃಷ್ಣನ ಘೋಷಣೆ ತುಂಬಿದ ಕೌರವಸಭೆಯಲ್ಲಿ ನಡೆಯುತ್ತದೆ.

ಭೀಮನೊಂದಿಗೆ ಕೌರವರ ಗುಂಪು ಹೋರಾಡುವುದಿರಲಿ, ಕೆರಳಿ ನಿಂತ ಭೀಮನ ಮುಖವನ್ನು ಕಣ್ಣೆತ್ತಿ ನೋಡುವ ಅರ್ಹತೆಯನ್ನೂ ಸಹ ಯಾರೊಬ್ಬರೂ ಹೊಂದಿಲ್ಲ ಎನ್ನುವ ಕೃಷ್ಣನ ವಾಕ್ಯ ಭೀಮನ ಹಿರಿಮೆಗೆ ಹಿಡಿದ ಕನ್ನಡಿ.

ಕುರುಕ್ಷೇತ್ರ ಯುದ್ಧದಲ್ಲಂತೂ ಭೀಮನದೇ ಸಿಂಹಪಾಲು. ಸ್ವತಃ ದುರ್ಯೋಧನನೇ ಭೀಮನಿಂದ ರಕ್ಷಿತವಾದ ಪಾಂಡವ ಸೇನೆ ತಮ್ಮನ್ನು (ಕೌರವರನ್ನು) ಪರಾಭವಗೊಳಿಸುವ ಕಾರ್ಯದಲ್ಲಿ ಅತ್ಯಂತ ಸಮರ್ಥ ಎಂದು ಘೋಷಿಸಿದ್ದು ಇದಕ್ಕೆ ನಿದರ್ಶನ. (ಪರ್ಯಾಪ್ತಂತ್ವಿದಮೇತೇಷಾಂ ಬಲಂ ಭೀಮಾಭಿರಕ್ಷಿತಮ್).

ದ್ರೋಣಪರ್ವದಲ್ಲಿ, ದ್ರೋಣರ ಸೇನಾಧಿಪತ್ಯದ ನಾಲ್ಕನೆಯ ದಿನ (ಒಟ್ಟಾರೆ ಯುದ್ಧದ ಹದಿನಾಲ್ಕನೆಯ ದಿನ) ಭೀಮ ಪ್ರದರ್ಶಿಸಿದ ಯುದ್ಧ ಕೌಶಲ ಅನುಪಮ. ಅನೇಕ ಬಾರಿ ದ್ರೋಣರ ರಥವನ್ನು ಬರಿಗೈಯಿಂದ ಎತ್ತಿ ಎಸೆಯುತ್ತಾ ಅವರು ಯೋಜಿಸಿದ ಶಕಟಾಬ್ಜಚಕ್ರವ್ಯೂಹದಲ್ಲಿ ಅಸಮಾನ ಪರಾಕ್ರಮವನ್ನು ಭೀಮ ತೋರಿಸಿದ. ಅಂದು ಕರ್ಣನನ್ನು ಶಸ್ತ್ರಾಸ್ತ್ರ ಯುದ್ಧದಲ್ಲಿ ಒಟ್ಟು ಇಪ್ಪತ್ತೊಂದು ಸಲ ಸೋಲಿಸಿದ ಭೀಮನ ಪರಾಕ್ರಮ ಅದ್ವಿತೀಯ ಎಂಬುದಕ್ಕೆ ನಿದರ್ಶನ.


ಹದಿನಾರನೆಯ ದಿನ ನಡೆದ ಭೀಮ–ಅಶ್ವತ್ಥಾಮರ ಯುದ್ಧ ಮಹಾಭಾರತವೇ ವರ್ಣಿಸಿರುವಂತೆ ಜಗತ್ತು ಕಂಡ 'ನಭೂತೋ ನ ಭವಿಷ್ಯತಿ' ಎನಿಸಿತು. ಶಸ್ತ್ರಾಸ್ತ್ರ ಯುದ್ಧ, ಸ್ವಯಂ ಶಿವನ ಅವತಾರವೆನಿಸಿದ ಅಶತ್ಥಾಮನನ್ನು ಸಕಲ ಬಗೆಯಲ್ಲೂ ಸೋಲಿಸಿ ಕೊನೆಗೆ ಅವನನ್ನು ಮೂರ್ಛೆಗೊಳಿಸಿದ್ದು ಭೀಮನೇ. ಈ ಪ್ರಸಂಗ ಭೀಮನ ಅಸ್ತ್ರವಿದ್ಯಾಕೌಶಲ ಕರ್ಣ, ಅರ್ಜುನ ಮೊದಲಾದವರಿಗಿಂತ ಅತ್ಯುನ್ನತ ಮಟ್ಟದ್ದು ಎನಿಸಿದೆ.

ಭೀಮನಿಂದ ಕರ್ಣ ಸೋತ ಬಗೆಯಂತೂ ತುಂಬಾ ಹೀನಾಯ ಎನ್ನಿಸುವಂತಹದು. ಒಟ್ಟಾಗಿ ಕುರುಸೇನೆಯ ಹನ್ನೊಂದು ಅಕ್ಷೋಹಿಣಿ ಸೇನೆಯ ಸಿಂಹಪಾಲು ಬಲಿಯಾದದ್ದು ಭೀಮಸೇನ ಒಬ್ಬನಿಗೇ. ಭೀಮಸೇನ ಮಾಡಿದ ದುರ್ಯೋಧನನ ಊರುಭಂಗವಂತೂ ಅವನ ವಿಶ್ವಖ್ಯಾತಿಯ ಹಿರಿಮೆಗೆ ಅತ್ಯುತ್ತಮ ನಿದರ್ಶನ.

ಶಾಂತಿಪರ್ವ ಅನುಶಾಸನಪರ್ವಗಳಲ್ಲಿ ಭೀಮನ ಹಿರಿಮೆ ನಿರೂಪಿತವಾಗಿದೆ. ಪುರುಷಾರ್ಥಗಳಲ್ಲಿ ಕಾಮದ ಮಹತ್ವವನ್ನು ಭೀಮಸೇನ ನಿರೂಪಿಸಿದ ರೀತಿ ಅತ್ಯಂತ ವಿಲಕ್ಷಣ ಹಾಗೂ ಅಷ್ಟೇ ಅತಾತ್ವಿಕ. ಅಶ್ವಮೇಧಪರ್ವದಲ್ಲಿ ನಡೆದ ಕಲಿನಿಗ್ರಹದ ಕಾರ್ಯವೂ ಭೀಮನದೇ ಆಗಿತ್ತು.

ಆಶ್ರಮವಾಸಿಕ ಪರ್ವದಲ್ಲಿ ಧೃತರಾಷ್ಟ್ರನು ವಿರಕ್ತನಾಗಿ ತಪಸ್ಸಿಗೆ ತೆರಳುವಂತಹ ಕಾರ್ಯದಲ್ಲೂ ಭೀಮನದೇ ಪ್ರಧಾನವಾದ ಪಾತ್ರ. ಮಹಾಪ್ರಸ್ಥಾನಪರ್ವದಲ್ಲಿ ದ್ರೌಪದಿ ಮೊದಲಾದವರು ದೇಹ ತೊರೆಯುತ್ತಿದ್ದಂತೆ ಯುಧಿಷ್ಠಿರನ ಉತ್ತರಗಳ ಮೂಲಕ ಅವನ ಋಣ ವಿಮೋಚನೆ ಮಾಡಿಸಿದವನು ಭೀಮನೇ. ಸ್ವರ್ಗಾರೋಹಣಪರ್ವದಲ್ಲೂ ಮತ್ತೆ ಮಿಂಚಿದ್ದು ಭೀಮನ ವೈಭವವೇ. ಹೀಗಾಗಿ ಮಹಾಭಾರತ ಒಟ್ಟಾಗಿ ಭೀಮಪರ್ವವೇ ಆಗಿದೆ ಎನ್ನುತ್ತದೆ ಡಾ.ಪ್ರಭಂಜನಾಚಾರ್ಯ ಅವರ ಭೀಮಪರ್ವ ಕೃತಿ.

(ಕೃಪೆ: ಕರ್ಮವೀರ, ಮೇ 5)



Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**